Regd No. M 1299 ॥ ಸತ್ಯಾನ್ನಾಸ್ತಿ ಪರೋ ಧರ್ಮಃ ॥ ಬಿಡಿ ಸಂಚಿಕೆ ೩ ಪೈ.

# ಸತ್ಯವಾದಿ

ವರ್ಷಕ್ಕೆ ರೂ. 1—0—0 ಸ್ಥಳಕ್ಕೆ (ಮೈಸೂರು ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾದುದು) ವರ್ಷಕ್ಕೆ ರೂ. 1—10—0 ಪರಸ್ಥಳಕ್ಕೆ

ಪ್ರತಿ ಬುಧವಾರ ಪ್ರಕಟಿಸಲ್ಪಡುವದು

ಸಂಪುಟ 19 ] ಮೈಸೂರು. ಬುಧವಾರ 22 ನೆ ಏಪ್ರಿಲ 1936 [ ಸಂಚಿಕೆ 32

## ಮೈಸೂರು ಎಸ್. ಎನ್. ಪಂಡಿತರ

## ಬಿಳೀಹಲ್ಲುಪುಡಿ! ಕರೀಹಲ್ಲುಪುಡಿ! ಮೈಸೂರು ಟೂತ್‌ಪೇಸ್ಟ್!

**ಬಿಳೀಹಲ್ಲುಪುಡಿ**—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯಾಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಣ 1 ಕ್ಕೆ (ಸಿಹಿ, ಉಪ್ಪು) 9 ಪೈ ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

**ಕರೀ ಹಲ್ಲುಪುಡಿ**—ಇದನ್ನು ನಿತ್ಯವೂ ಉಪಯೋಗಿಸುವುದರಿಂದ್ದು, ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಮಾಡಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿಕ್ 1 ಕ್ಕೆ 2 ಆಣೆ.

**ಮೈಸೂರು ಟೂತ್‌ಪೇಸ್ಟ್**—ಸೀಮೆಯಿಂದ ಬರುವ ಟೂತ್‌ಪೇಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳ್ಳವನ್ನೂ ಉಂಟುಮಾಡುತ್ತದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್-ಟರ್ (ದಂತ ತರ್ಕರ) ಅಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಷ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಒಂದಾವರ್ತಿ ಪರೀಕ್ಷಿಸಿ ನೋಡಬೇಕಾದ್ದು. ಟಿಕ್ 1 ಕ್ಕೆ 5 ಆಣೆ.

[ ಸರಾ:—ಮೇಲಿನ ಪುಡಿಗಳಲ್ಲಿ ಬತ್ತದಹೊಟ್ಟಿನಬೂದಿ, ಸೀಮೆಸುಣ್ಣ ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಕೊಡಲ್ಪಡುವುದು. ನಮ್ಮಲ್ಲಿ ಎಲ್ಲಾವಿಧವಾದ ಆಯುರ್ವೇದೀಯ ಮಹೌಷಧಗಳೂ ತಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ ]

ಪ್ರೊಪ್ರೈಟರ್ಸ್
ಎಸ್. ಎನ್. ಪಂಡಿತ್ ಅಂಡ್ ಸನ್ಸ್
Manufg Chemists Druggists & Physician

ಮಳವಳ್ಳಿ ಏಜೆಂಟರು :
ಮಿ| ಜಿ. ಎಸ್. ವೆಂಕಟರಾವ್

ಆಡ್ರೆಸ್
ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ
೧೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

## Season Deposits

Not exceeding Rs. 25,000 and falling below Rs. 500 from any one individual are received at Head Office and Branches of the Quilon Bank, Limited, from 15 th March to 15 th May, 1936, maturing from June to August, at 3½ per cent interest per Annum.

Remittances received at par at all Branches and Agencies.

## The Quilon Bank

( Incorporated in Travancore, 1919 )

For the growing evil of unemployment of the educated youth of the country, Lord Willingdon has suggested an initial remedy. The entire educational system has got to be adjusted in relation to the needs of the country. It is said that the Central Advisory Board of Education which has been examining this problem has given a lead already. This is to develop science and agriculture in the country.

o o

It is good that the Government of India have arrived at the conclusion that in the interests of the Indian rice and wheat grower that the continuence of the operation of import duty on them for another year is essential. It is also consequently proposed to continue the import duty on wheat and wheat flour at the reduced rate of one rupee per hundredweight for another year. (P. M)r

# ಅನುಕೂಲ ದಾಂಪತ್ಯ

## ಒಂದು ಕಥೆ

(ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು)

೪

ಮೋಹನರಾವು ಕಮಲಳನ್ನು ಮೋಹಿಸಿದ ವಿಷಯವು ಕೆಲವು ದಿವಸದ ಅನಂತರ ರಾಮರಾಯರಿಗೆ ತಿಳಿಯಿತು. ಬಹಳ ಕೋಪದಿಂದ ಕೆರಳಿಕೆಂಡವಾದನು. ಮಗನ ಮೋಸವನ್ನು ನೋಡಕೂಡದೆಂದುಕೊಂಡನು. ಮಹಾಲಕ್ಷ್ಮಮ್ಮನವರ ಮೇಲೆ ತನ್ನ ಪ್ರತಾಪವನ್ನೆಲ್ಲಾ ತೋರಿಸಿದನು. ಮೋಹನರಾವು ಕಮಲಳೊಂದಿಗೆ ಮಾತನಾಡಕೂಡದೆಂದೂ, ಕಮಲ ತವ್ಮ ಮನೆಗೆ ಬರಕೂಡದೆಂದೂ, ಇನ್ನೂ ಏನೇನೋ ಹೇಳಿದನು. ಎಷ್ಟು ಅಡ್ಡಗಟ್ಟಿದರೂ ಆಗಬೇಕಾದ ಕೆಲಸ ಆಗದಿರುವದೇ ಮೋಹನ ರಾವಿನ ವಿಷಯದಲ್ಲಿ.

೫

"ಇಗೋ"

"ನಿನ್ನನ್ನೇ"

"ನಿನ್ನನ್ನೇ ಕರಿಯುವ್ದು"

"ಏನು ಮಾಡ್ತಿರುವಿ"

"ಏನು ಕೆಲಸ....."

"ಒಂದು ಮಾತು. ಇಲ್ಲಿ ಬಂದು ಹೋಗು"

"ಮನೆಯಲ್ಲಿ ಅಡಿಗೆ ಮಾಡುತ್ತಿದ್ದೇನೆ"

"ಬಹಳ ಮುಖ್ಯ ಕೆಲಸವಿದೆ ಬಾ"

"ಪಲ್ಯ ಕೆಟ್ಟು ಹೋಗುತ್ತದೆ ಈಗ ಬಂದರೆ"

೫

"ಹೋದರೆ ಹೋಗಲಿ ನೀನು ಇಲ್ಲಿ ಒಂದು ಕೋಗು"

"ಕಮಲಳಿಗೆ ಯಾವಾಗ ವದವೆ ಮಾಡೋಣ"

"ನಿವ್ಮಿಷ್ಟ"

"ಸರಿ-ಸೂರ್ಯಪ್ರಕಾಶಂರಾಯರನ್ನು ಕಂಡಿರುವೆಯಾ?"

"ಅವರು ಯಾರು?"

"ಗುಂಟೂರಿನಲ್ಲಿ ವಕೀಲರು"

"ಅವರಿಗೆಷ್ಟು ಮಂದಿ ಮಕ್ಕಳು?"

"ಒಬ್ಬನೇ ಮಗ-ಬಿ.ಎ., ಪರೀಕ್ಷೆಗೆ ಓದುತ್ತಿದ್ದಾನೆ"

ಅವರಿಗೇನಾದರೂ ಆಸ್ತಿ ಇದೆಯೇ?

ಆಸ್ತಿಗೇನು? ಸ್ವಲ್ಪವೋ, ಜಾಸ್ತಿಯೋ ಇದೆ

ಹುಡುಗ ಹೇಗಿದ್ದಾನೆ?

ಕರ್ರಗಿದ್ದಾನೆ.

ಆ! ಕರ್ರಗಿದ್ದಾನೆಯೇ?

ಕೆಂಪು ಕಪ್ಪುಗನ್ನ ಅರೆದು ತಿನ್ನುತ್ತೀಯಾ?

ಹಾಗಾದರೆ ಶಿಲ್ಕವ್ವಂಟೇ?

ಇಲ್ಲದೇನು? ಮತ್ತೆ

ಇದೆ [illegible]

ಸರಿವ್ದುವೆಯಾವಾಗ.

ಇನ್ನು ೪ ದಿನಗಳಿಗೆ.

ಹುಡುಗನ ಹೆಸರೇನು?

ವೆಂಕಟ್ರಾವು,

ಸರಿ-ನಿವ್ಮಿಷ್ಟ.

೬

ರಾತ್ರಿ ೧೦ ಗಂಟೆಗಳ ಸಮಯ; ಮೇಳವಾಗುತ್ತಿದೆ ಬಂದು ಹೋಗುತ್ತಿರುವ ಜನಕ್ಕೆ ಪಾರವೇ ಇಲ್ಲ ಚ್ಪರನೆಲ್ಲಾ ಜನರಿಂದ ತುಂಬಿದೆ. ಕಮಲಳನ್ನು ಹುಡುಕುತ್ತಿದ್ದಾರೆ ಮನೆಯಲ್ಲಿ. ಬ್ರಾಹ್ಮಣರ ತೊಂದರೆ ಹೆಚ್ಚಿತು. ಮನೆಯಲ್ಲಿ ಗಡಿಬಿಡಿಯಾಗಿದೆ. ಏನೋ ಎಂದು ವಿಚಾರಿಸಿದಾಗ ಕಮಲ ಕಾಣಿಸಲಿಲ್ಲವೆಂದು ತಿಳಿಯಿತು.

೭

ಮೋಹನರಾವು ಬಿ.ಎ., ಪರೀಕ್ಷೆಯಲ್ಲಿ ಉತ್ತೀರ್ಣನಾದನು. ಎಂ.ಎ., ಪರೀಕ್ಷೆಗೆ ಓದಲು ಮದರಾಸು ಪಚ್ಚೈಯಪ್ಪ ಕಾಲೇಜಿನಲ್ಲಿ ಸೇರಿದನು. ಒಂದು ಮನೆಯ ಹೋಲ್ಬಾಗವನ್ನು ಬಾಡಿಗೆಗೆ ತೆಗೆದುಕೊಂಡನು. ಒಂದು ದಿನ ಬೀಚಿಗೆ ತಿರುಗಾಡಲು ಹೊರಟನು. ಬೀಚಿನ ಸಮೀಪದಲ್ಲಿ ಸ್ವಲ್ಪ ಕಾಲ ವಿಶ್ರಾಂತಿಯನ್ನು ತೆಗೆದುಕೊಂಡನು. ಅಷ್ಟರೊಳಗೆ ಅಲ್ಲಿಗೆ ಒಂದು ಮೋಟಾರ್ ಕಾರ್‌ನಲ್ಲಿ ಕುಳಿತು ಒಬ್ಬ ವ್ಯಕ್ತಿಯು ಬಂದಳು. ಆ ಪಕ್ಕಜಡೆ, ಆ ಕನ್ನಡಕ, ಆ ಎಕ್ಕಡ, ಆ ಅಗ್ರಾಶೀಕೆ, ಆ ಟಬ್ಬಿ ಪಿನ್ನು, ಇವೆಲ್ಲವನ್ನೂ ಕಂಡು ನಮ್ಮವನು ಆಶ್ಚರ್ಯದಲ್ಲಿ ಮುಳುಗಿನು. ಸಮೀಪದಲ್ಲಿ ಕಾರು ನಿಂತಿತು. ಹಾಗೆಯೇ—ಹಾಗೆಯೇ—ಕೊಳ್ಳುವದು, ಕೂಡ ಲಂಚವೆನ್ನಿಸಲ್ಪಡುವದು.

* *

ಹಗೆತನವು ನಿಷ್ಪ್ರಯೋಜಕರ ವಿಷಯೇ ದ್ಯೋಗವು.

ಂ ಂ

ಅಜ್ಞಾನಕ್ಕೆ ಮಿಂಚಿದ ವ್ಯಾಧಿಯು ಪ್ರಪಂಚದಲ್ಲಿ ವತ್ತೊಂದಿಲ್ಲ. ಜ್ಞಾನವೇ ಧನವು. ಜ್ಞಾನವೇ ಪ್ರಾಣವು. ಜ್ಞಾನವೇ ಸರ್ವಸ್ವವು.

ಂ ಂ

ಔಷಧಿ ಸದೃಶವಾದದ್ದು ಮಾತ್ರ. ಅಲು ಪ್ರಮಾಣದಲ್ಲಿ ಅದು ವ್ಯಾಧಿಯನ್ನು ಗುಣಪಡಿಸ್ಪವದು. ಪ್ರಮಾಣವು ಹೆಚ್ಚಿದಲ್ಲಿ ಸಾವು ಪ್ರಾಪ್ತವಾಗುವದು. ಓಂ.

---

ಮಾಧುರ್ಯವಾದ ಸಂಗೀತವನ್ನಾಗಲಿ ಉಪನ್ಯಾಸವನ್ನಾಗಲಿ ಕಣ್ಣುಗಳನ್ನು ಮುಚ್ಚಿಕೊಂಡು ಕೇಳಿದಲ್ಲಿ ಒಹ ಆನಂದ ನ್ನುಂಟುಮಾಡುವದೆಂದು ಶಾಸ್ತ್ರಜ್ಞರೊಬ್ಬನು ತಿಳಿಸಿರುತ್ತಾನೆ

ಆಚಾರ್ಯ ಗಾಲ್ವಟ್ ಎಂಬ ಶಾಸ್ತ್ರಜ್ಞನು ಒಂದು ಹೊಸ ಸಮೂಸೆಯ ಶಿಲ್ಪಿಯನ್ನು ತಯಾರಿಸಿರುವನು. ಅದನ್ನು ಊದಿದಾಗ ಧ್ವನಿಯು ಮನುಷ್ಯರಿಗೆ ಕೇಳಬರುವದಿಲ್ಲ. ನಾಯಿಗಳಿಗೆ ಮಾತ್ರ ಕೇಳ ಒರುತ್ತದೆ. ಮನುಷ್ಯರಿಗಿಂತ ನಾಯಿಗಳ ಶ್ರವಣೇಂದ್ರಿಯಗಳ ಶ್ರವಣೇಂದ್ರಿಯ ಶಕ್ತಿಯು ಸೂಕ್ಷ್ಮವಾದುದೆಂದು ಆತನು ಹೇಳುವನು.

ವಂಗದೇಶದ ಉವಾಧ್ಯಾಯನಾದ ಶ್ರೀ ವಿಪಿನ ಚಂದ್ರದತ್ತನೆಂಬಾತನು ಒಂದು ಹೊಸ ಬಗೆಯ ಫ್ಲೇಟನ್ನು ತಯಾರಿಸಿರುವನು. ಅದು ಒಡೆಯುವದಿಲ್ಲ. ಮರದಿಂದ ಮಾಡಲ್ಪಟ್ಟದ್ದು, ಅದನ್ನು ಇನ್ನೂ ಮಾರಾಟಕ್ಕಿಟ್ಟಿರುವದಿಲ್ಲ.

# ಲಕ್ಷ್ಮೀ ಸರಸ್ವತೀಯರ ಸಂವಾದ

ಒಂದು ದಿನ ಸ್ವರ್ಗಲೋಕದಲ್ಲಿ ಸಂಪತ್ತಿನ ಮೂಲಕರ್ತಳಾದ ಲಕ್ಷ್ಮೀದೇವಿಗೂ, ಜ್ಞಾನ ಮತ್ತು ಬುದ್ಧಿಗಳ ಮೂಲಕರ್ತಳಾದ ಸರಸ್ವತೀದೇವಿಗೂ ಅವರಲ್ಲಿ ಯಾರು ಹೆಚ್ಚೆಂಬ ವಿಷಯದಲ್ಲಿ ಸಂವಾದ ಉಂಟಾಯಿತು "ನಾನು ಶಿರಿಸಂಪದಗಳ ಯಜಮಾನಿಯು" ಜನರು ಇವನ್ನೇ ಅವರ ಜೀವಿತ ಕಾಲದಲ್ಲಿ ಹೆಚ್ಚು ಬಯಸುವಂಥಾದ್ದು. ನನ್ನ ದಯೆಯಿಲ್ಲದೆ ಯಾರೂ ಪ್ರಪಂಚದಲ್ಲಿ ಜೀವಿಸಲಾರರು. ನನ್ನ ಅಗ್ರಹಕ್ಕೆ ಪಾತ್ರರಾದವರಿಂದ ಐಶ್ವರ್ಯವು ಒಂದು ಕ್ಷಣದಲ್ಲಿ ದೂರವಾಗುವದು. ಚಕ್ರವರ್ತಿಯೂ ಫಕೀರನಾಗುವನು. ಅಂತಹವನನ್ನು ತನ್ನವರೆಂದು ನನ್ನ ಅನುಗ್ರಹವಿರುವಾಗ ಭಾವಿಸುತ್ತಿದ್ದ ಒಂದು ಗಳೂ ನಿಕೃಷ್ಟವಾಗಿ ನೋಡುವರು. ಅಂತಹವನು ಎಲ್ಲರಿಂದಲೂ ದ್ವೇಷಿಸಲ್ಪಟ್ಟವನಾಗಿ, ಬಂಧುಬಳಗಗಳಿಲ್ಲದೆ, ಸ್ನೇಹಿತರಿಲ್ಲದೆ, ತನ್ನವರೆಂಬವರು ಯಾರೂ ಇಲ್ಲದೆ, ಮನೆಮಠಗಳಿಲ್ಲದೆ ಅಲೆದಾಡಲೇಬೇಕಾಗುವದು. ನನ್ನ ಅನುಗ್ರಹವಾಯಿತೆಂದರೆ ಕಣ್ಣು ಮುಚ್ಚಿ ಬಿಡುವಷ್ಟರೊಳಗೆ ಎಲ್ಲವೂ ಒದಲಾಯಿಸುವದು ರೋಗಿಯು ಭೋಗಿಯಾಗುವನು, ಚಂಡಾಲನು ಪೂಜ್ಯನಾಗುವನು, ದರಿದ್ರನು ಕುಬೇರನಾಗುವನು. ಹೆಚ್ಚೇಕೆ, ಎಲ್ಲಾ ವಿಷಯಗಳಲ್ಲಿಯೂ ಉಚ್ಚಸ್ಥಿತಿಯನ್ನು ಹೊಂದಿದಂಥವನಾಗುವನು. ಎಲ್ಲರೂ ಅವನನ್ನು ಮರ್ಯಾದೆಯಿಂದ ನೋಡುತ್ತಿರುವರು. ಅಂದರೆ ಮನುಷ್ಯನನ್ನು ಉಚ್ಚಸ್ಥಿತಿಗೆ ತರಲು ಅಥವಾ ಪಾತಾಳಕ್ಕೆ ತುಳಿಯಲು ನಾನೇ ಕಾರಣಳು, ನನ್ನ ಉಪಕಾರ ಮಹಿಮೆ ಇಂತಹದು ಎಂದು ನುಡಿದಳು ಲಕ್ಷ್ಮಿ.

ಆಗ ಸರಸ್ವತಿಯು ಹೇಳುತ್ತಾಳೆ—"ನಾನು ಜ್ಞಾನ, ವಿಜ್ಞಾನ, ವಿವೇಕಗಳ ಯಜಮಾನಿಯು" ನನ್ನ ದಯೆಯಿಲ್ಲದಿರುವಾಗ ದ್ರವ್ಯದಿಂದೇನು ಪ್ರಯೋಜನ? ಕುಬೇರನಷ್ಟು ಧನವಿರುವವನೂ ಕೂಡ ಸರಿಯಾದ ವಿವೇಕವಿಲ್ಲದಿದ್ದಲ್ಲಿ ದುರ್ಮಾರ್ಗದಲ್ಲಿ ಆ ಹಣವೆಲ್ಲವೂ ಅತಿ ಶೀಘ್ರದಲ್ಲಿ ವ್ಯಯವಾಗಿ ಹೋಗುವದು. ಬುದ್ಧಿಯೇ ವಿಕಲ್ಪವಾಗಿರುವಾಗ ಅಂದರೆ ಸರಿಯು ತಪ್ಪಾಗಿಯೂ, ತಪ್ಪು ಸರಿಯಾಗಿಯೂ ಕಾಣುತ್ತಿರುವಾಗ ಮನುಷ್ಯನು ಹೇಗೆ ಸುಖಿಯಾಗಿರಬಲ್ಲನು? ನನ್ನ ದಯೆಯಿಲ್ಲದೆ ಹೋದರೆ ಮನುಷ್ಯನ ಬಾಳು ಬಂದು ಕಡ್ಡಿಗೂ ಹೀನವಾಗುವದು ಅಂಥಹವನು ಮತಿಭ್ರಂಶತೆಯಿಂದ ಒಂದೊಂದುವೇಳೆ ಆತ್ಮಹತ್ಯವನ್ನು ಕೂಡ ಮಾಡಿಕೊಳ್ಳುವನು, ಮನುಷ್ಯನು ಮತಿಹೀನನಾದಲ್ಲಿ ಪ್ರಪಂಚವೇ ಕಳಗೆ ಮೇಲಾಗುವದು, ನನ್ನ ಶಕ್ತಿಯು ಇಷ್ಟು ಉದ್ದ ಇಷ್ಟು ಅಗಲ ಎದೆಯೆಂದು ಬಂಭಕೊಚ್ಚಿಕೊಂಡಲ್ಲಿ ಬಂದಲಾಭವೇನು? ನಮ್ಮ ಶಕ್ತಿಗಳನ್ನು ಪ್ರಯೋಗಿಸಿ ನೋಡೋಣ ನೋಡು ಅಲ್ಲಿ ಹರಕಲು ಬಟ್ಟೆಗಳನ್ನು ಹಾಕಿಕೊಂಡು ಭಿಕ್ಷಕ್ಕೆ ಆ ತಿರುಕನು ಹೋಗುತ್ತಿರುವನ, ಒಂದು ಕ್ಷಣದಲ್ಲಿ ಅವನನ್ನು ಕುಬೇರನನ್ನಾಗಿಯೂ, ಸಂತೋಷಿಯಾಗಿಯೂ, ಸಖಿಯಾಗಿಯೂ, ಸಂಘದಲ್ಲಿ ಮಾನ್ಯನಾಗಿಯೂ ಮಾಡುವೆನು, ಹೀಗೆಂದು ಲಕ್ಷ್ಮೀಯು ಹೇಳುತ್ತ ಮೇಲಸೀದಲೇ ಒಂದು ದೊಡ್ಡ ಬಂಗಾರದ ರಾಶಿಯನ್ನು ಆ ತಿರುಕನ ದಾರಿಯಲ್ಲಿ ಅವನಿಗೆದುರಾಗಿ ಎಸೆದಳು, ಕೂಡಲೆ ಸರಸ್ವತಿಯು ಅವನ ಬುದ್ಧಿಯು ವಿಕಲ್ಪವಾಗುವಂತೆ ಮಾಡಿದಳು, ಆಗ ಅವನು ಕರುಡನು ಹೇಗೆ ಭಿಕ್ಷವನ್ನೇ ಮಾಡುವನೋ ನೋಡೋಣ, ಎನ್ನುತ್ತ ಕಣ್ಣು ಮುಚ್ಚಿಕೊಂಡು ನಡೆಯುತ್ತ ಆ ಬಂಗಾರದ ರಾಶಿಯನ್ನು ದಾಟುವವರೆಗೂ ಕಣ್ಣು ತೆರೆಯಲಿಲ್ಲ ನೋಡು ಲಕ್ಷ್ಮೀ—ಹೇಗೆ ನಿನ್ನ ಶಕ್ತಿಯನ್ನು ನಾನು ಅತಿಕ್ರಮಿಸಿದೆನೋ? ಎಂದಳು ಸರಸ್ವತಿ, ಲಕ್ಷ್ಮೀಯು ಸಂತೋಷದೊಡನೆ ತನ್ನ ಸೋಲನ್ನು ಒಪ್ಪಿಕೊಂಡು ಬುದ್ಧಿಯ ಮುಂದೆ ಹಣವು ನಿಷ್ಪ್ರಯೋಜನವು ಎಂಬ ವಿಷಯವನ್ನು ಒಪ್ಪಿಕೊಂಡಳು.

# ವಿವಿಧ ವಿಷಯಗಳು

ಸರ್ಕಾರದ ಹಣವನ್ನು ಅಪಹರಿಸಿದ್ದಕ್ಕಾಗಿ ರಷ್ಯ ಸರ್ಕಾರದವರು ಇಬ್ಬರಿಗೆ ಮರಣ ಶಿಕ್ಷೆಯನ್ನೂ ೧೦ ಮಂದಿಗೆ ೧೦ ವರ್ಷಗಳ ಸಜೆಯನ್ನೂ ವಿಧಿಸಿರುವರು. ಇನ್ನು ಮುಂದೆ ಯಾರೂ ಹಾಗೆ ಮಾಡದಿರಲು ಈ ಕಠಿಣ ಶಿಕ್ಷೆಯನ್ನು ವಿಧಿಸಿರುವರು.

ಹಿಂದೂ ರಾಜ್ಯದ ಕಟ್ಟಾಳ ನಿರ್ಮಾಣದಲ್ಲಿ ಹೆಸರು ಹೊಂದಿದವರು, ಶಿಲ್ಪನಿರ್ಮಾಣ ದೀಕ್ಷಾ ಬದ್ಧರಾಗಿದ್ದವರು ಅವರು. ಆ ರಾಜರಲ್ಲಿ ಒಬ್ಬರು ೧೩ ಮೈಲು ದೂರದಷ್ಟು ಸೋಪಾನಗಳನ್ನೂ ಯಾತ್ರಾರ್ಥಿಗಳಿಗಾಗಿ ಕಟ್ಟಿಸಿದ್ದರೆಂದು ತಿಳಿಯಬರುತ್ತದೆ

ಇಟಲಿಗೆ ಯಾರೂ ಯಾವ ಬಗೆಯ ಆರ್ಥಿಕ ಸಹಾಯವನ್ನು ಮಾಡಕೂಡದೆಂದು ಹೈದರಾಬಾದು ನೈಜಾಂರವರು ಫರ್ಮಾನಾ ಒಂದನ್ನು ಈಜೆಗೆ ಹೊರಡಿಸಿರುವರು.

ಇಟಾಲಿಯರು "ಆಡಿಸ್ ಅಬಾಬಾ ಪಟ್ಟಣದ ಮೇಲೆ ಆಕಾಶದಿಂದ ಬಾಂಬುಗಳನ್ನು ದೀಳಿಸಿದ್ದಕ್ಕಾಗಿ ಇತಿಯೋಪಿಯ ಸರ್ಕಾರವು ನಾನಾ ಜಾತಿ ಸಮಿತಿಗೆ ತನ್ನ ಅಗ್ರಹವನ್ನು ವ್ಯಕ್ತಪಡಿಸಿರುತ್ತದೆ. ಈ ಅಗ್ರಹವು ನಿಷ್ಪ್ರಯೋಜನವೇ ಸರಿ,

ಕಲ್ಕತ್ತೆಯಲ್ಲಿ ಸ್ಫೋಟಕ ವ್ಯಾಧಿಯು ಬಹಳ ಹೆಚ್ಚಿರುತ್ತದೆ. ೧೯೨೫ ರಿಂದ ಇಷ್ಟು ತೀವ್ರವಾಪಿ ಅಲ್ಲಿ ಈ ವ್ಯಾಧಿಯು ಇದ್ದಿಲ್ಲ. ಕಳೆದವಾರ ಸುಮಾರು ೪೦೦ ಮಂದಿ ವ್ಯತ್ಯವಶರಾದರೆಂದು ತಿಳಿದುಬಂದಿದೆ.

# ಶ್ರೀ ಕೃಷ್ಣ

ನರಕಾಸುರನು ಅನೇಕ ಹೆಂಗಸರನ್ನು ಬಂದಿಗಳನ್ನಾಗಿ ಮಾಡಿದ್ದನು. ಅವರನ್ನು ಬಂಧವಿಮುಕ್ತರನ್ನಾಗಿ ಮಾಡಿದನು ಶ್ರೀಕೃಷ್ಣನು ಆ ಸ್ತ್ರೀಯರು ಪರಪುರುಷನ ಅಧೀನದಲ್ಲಿದ್ದುದ್ದರಿಂದ ಅವರ ತಾಯಿತಂದೆಗಳು ಮತ್ತು ಪೋಷಕರು ತಮ್ಮ ತಮ್ಮ ಮನೆಗಳಿಗೆ ಸೇರಿಸಿಕೊಳ್ಳಲು ಇಚ್ಛಿಸಲಿಲ್ಲ. ಆಪದ್ಬಾಂದವನೂ ಅನಾಥರಕ್ಷಕನೂ ಶ್ರೀ ಕೃಷ್ಣನಾದುದರಿಂದ ಅವರನ್ನು ತನ್ನ ರಕ್ಷಣೆಯಲ್ಲಿ ಶಿಷ್ಯಭಾವನೆಯಲ್ಲಿಟ್ಟುಕೊಂಡಿದ್ದನು. ಆವರೇ ೧೬,೦೦೦ ಗೋಪಿಕೆಯರು. ಶ್ರೀ ಕೃಷ್ಣನು ಅಸ್ಖಲಿತ ಬ್ರಹ್ಮಚಾರಿಯೂ ಆಗಿದ್ದನು. ಆ ಗೋಪಿಕೆಯರೊಡನೆ ಆತನ ಆಲಿಂಗನೆಯು ಪತಿಪತ್ನೀಯರ ಆಲಿಂಗನೆಯಾಗಿರಲಿಲ್ಲ. ಆದರೆ ಗುರು ಶಿಷ್ಯರ ಆಲಿಂಗನೆಯಾಗಿತ್ತು.

ಬಹಿರಂಗಸ್ಥಾನಗಳಲ್ಲಿ ವಸ್ತ್ರಹೀನರಾಗಿ ಸ್ತ್ರೀಯರು ಸ್ನಾನವನ್ನು ಮಾಡಕೂಡದೆಂಬ ವಿಷಯವನ್ನು ಬೋಧಿಸುವುದಕ್ಕಾಗಿಯೇ ಆತನು ಸ್ನಾನಮಾಡುತ್ತಿದ್ದ ಗೋಪಿಯರ ವಸ್ತ್ರಗಳನ್ನು ಹರಣಮಾಡಿದ್ದು.

ಶ್ರೀ ಕೃಷ್ಣನ ಕಾಲವು ಇಂದಿಗೆ ಹದಿನೇಳು ಸಹಸ್ರ ವರ್ಷಗಳ ಹಿಂದಿನದು. ಆದರೂ ಆತನನ್ನು ಅಸೇತುಹಿಮಾಚಲ ಪರ್ಯಂತವಿರುವ ದೇಶದಲ್ಲಿ ಏಕೆ, ಇಡೀ ಜಗತ್ತು ಆತನ ಮಹಿಮೆಯನ್ನು ಕೊಂಡಾಡುತ್ತಿರುವರು. ಇಂತಹ ಮಹಾಮಹಿಮನಾದ ಪುರುಷೋತ್ತಮನನ್ನು ಚಿಂತಿಸಿದ ಕಾಲವೇ ಸುಖಕಾಲವು.

# ಹೊಸ ಚಕ್ರವರ್ತಿಗಳ ಅಮೃತ ನುಡಿಗಳು

ಪ್ರಪಂಚದಲ್ಲಿ ಯಾವ ಪುರುಷನಾದರೂ ೨೧ ನೆಯ ವಯಸ್ಸಿನೊಳಗಾಗಿ ಮದುವೆಯನ್ನು ಮಾಡಿಕೊಳ್ಳುವುದು ತಪ್ಪು.

ಕಳೆದ ಪ್ರಪಂಚದ ಮಹಾ ಯುದ್ಧವು ನಮಗೆ ಗುಣಪಾಠವನ್ನು ಕಲಿಸಿದೆ. ಅಂತಹ ಯುದ್ಧಕ್ಕೆ ಪುನಃ ಯತ್ನಿಸುವದು ತಕ್ಕುದಲ್ಲ.

ಇಂದಿನ ನಾಗರೀಕತೆಯು ಲೋಪಭೂಯಿಷ್ಟವಾಗಿರುತ್ತದೆ. ಸೂಳೆಯರ ವೃತ್ತಿಯು ನಮ್ಮ ನಾಗರಿಕತೆಗೆ ಪ್ರಬಲವಾದ ಕಳಂಕವಾಗಿದೆ. ಅದನ್ನು ನಿರ್ಮೂಲಮಾಡಲು ನಾವೆಲ್ಲರೂ ಯತ್ನಿಸತಕ್ಕದ್ದು. ಅದು ನಮ್ಮ ಧರ್ಮಮುಖ್ಯ ಕರ್ತವ್ಯ.

ಸೈನಿಕ ಶಿಕ್ಷಣೆಯು ಪ್ರತಿ ಮನುಷ್ಯನಿಗೂ ಅತ್ಯಾವಶ್ಯಕವು. ಆದರೆ ಆ ಶಿಕ್ಷಣೆಯು ಕೇವಲ ಯುದ್ಧದ ನಿಮಿತ್ತವಾಗಿಯೇ ಆಗಿರಕೂಡದು.

# ಸತ್ಯವಾದಿ

## ರಾಷ್ಟ್ರೀಯ ಮಹಾಸಭೆಯು

ಕಳೆದವಾರ ಲಕ್ನೋ ಪಟ್ಟಣದಲ್ಲಿ ರಾಷ್ಟ್ರೀಯ ಮಹಾಸಭೆಯ ೪೯ ನೇ ಅಧಿವೇಶನವು ಪಂಡಿತ ಜವಹರಿಲಾಲರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ನಡೆಯಿತು. ಇವರನ್ನು ಅಧ್ಯಕ್ಷ ಪೀಠಕ್ಕೆ ಕುಳ್ಳಿರಿಸುವುದಕ್ಕೆ ಮುಂಚೆ ಜಯಘೋಷವಾದ್ಯಗಳೊಡನೆ ವೈಭವದಿಂದ ಮೆರವಣಿಗೆಯಲ್ಲಿ ಕರೆತಂದರು. ಅಧಿವೇಶನಕ್ಕೆ ಒಟ್ಟು ೮೫೫ ಮಂದಿ ಪ್ರತಿನಿಧಿಗಳು ಬಂದಿದ್ದರೆಂದು ತಿಳಿದುಬಂದಿದೆ.

"ವರದೇ ಮಾತರಂ" ಗೀತೆಯು ಹಾಡಲ್ಪಟ್ಟ ಮೇಲೆ, ಪಂಡಿತರು ತಮ್ಮ ಭಾಷಣವನ್ನು ಹಿಂದಿಯಲ್ಲೇ ಮಾಡಿದರು. ಭಾಷಣವು ಸ್ಪೂರ್ತಿದಾಯಕವಾಗಿದ್ದು ಅನೇಕರಿಂದ ಮೆಚ್ಚಲ್ಪಟ್ಟಿದೆ. ಹಲವು ಪ್ರಚಲಿತ ವಿಷಯಗಳಿಂದೊಡಗೂಡಿರುವುದು; ಸಂಪೂರ್ಣ ಸ್ವಾತಂತ್ರ್ಯವೇ ಭರತಖಂಡಕ್ಕೆ ಬೇಕಾದುದೆಂದು ಒತ್ತಿ ಹೇಳಿರುತ್ತಾರೆ. ಈ ಲಕ್ನೋದಲ್ಲಿ "ಗಾಂಧಿಯಿಸಂ" ನಿಂದ "ಸೋಷಿಯಲಿಸಂ" ಗೆ ಕಾಂಗ್ರೆಸ್ ಒಂದು ಅಡಿ ಮುಂದಿಡಲಾಗಿದೆ. "ಸೋಷಿಯಲಿಸಂ" ಅಂದರೆ ಸಮಾಜಸತ್ತಾವಾದವು. ಇದು ಯೂರೋಪಿನ ಹಲವು ಕಡೆ ಪ್ರಚುರದಲ್ಲಿಯೂ ಪ್ರಾಬಲ್ಯದಲ್ಲಿಯೂ ಇರುತ್ತದೆ. ಆದರೆ ನಮ್ಮ ದೇಶಕ್ಕೆ ಅಷ್ಟು ಅನುಕೂಲವಾದುದಲ್ಲವೆಂದು ಅನೇಕರ ಮತ.

ಮಹಾತ್ಮ ಗಾಂಧಿಯರೂ, ಶ್ರೀ ರಾಜಗೋಪಾಲಾಚಾರ್ಯರವರೂ, ಭಾಗವಹಿಸದೇ ಸುಮ್ಮನೆ ಹೆಚ್ಚು ಕಡಮೆ ಪ್ರೇಕ್ಷಕರಂತಿದ್ದುದು ಸಕಾರಣವಾಗಿದೆ

ಈ ಮಹಾಸಭೆಯಲ್ಲಿ ತೀರ್ಮಾನಿಸಲ್ಪಟ್ಟ ಮುಖ್ಯ ಪ್ರಶ್ನೆಯು "ಅಧಿಕಾರ ಸ್ವೀಕಾರ" ವಿಚಾರವು. ಈ ವಿಷಯವು ತೀರ್ಮಾನಕ್ಕೆ ಈಗ ಸಕಾಲವಾಗಿದ್ದರೂ, ಮುಂದುಹಾಕಲಾಯಿತು.

ಮುಂದಿನ ಅಧಿವೇಶನವು ಮಹಾರಾಷ್ಟ್ರದಲ್ಲಿ ನಡೆಯುತಕ್ಕದ್ದೆಂದು ತೀರ್ಮಾನವಾಯಿತು.

---

ಮದ್ರಾಸಿನ ಟ್ರಾಂ ಗಾಡಿಯಲ್ಲಿ ಒಬ್ಬ ಹಿಂದೂ ಸ್ತ್ರೀಯು ಕುಳಿತಿದ್ದ, ಸ್ತ್ರೀಯರ ಸೀಟಿನ ಮೇಲೆ ಕುಳಿತು ಪೋಲೀಸು ಅಧಿಕಾರಿಗಳೊಡನೆ ಗದ್ದಲವೆಬ್ಬಿಸಿ ಇಬ್ಬರು ಆಂಗ್ಲೇಯ ಸೈನಿಕರು ಮಿಲಿಟರಿ ಶಿಸ್ತಿನ ಪ್ರಕಾರ ಕಠಿಣ ಶಿಕ್ಷೆಗಳಿಗೆ ಒಳಗಾಗಿರುವರು.

## ಸಾಯುವುದಕ್ಕೆ ಸಿದ್ಧನಾದನು!

ಕಲ್ಕತ್ತಾ ಪಟ್ಟಣದ ಭಾರಿ ಮಾರ್ವಾಡಿ ಶ್ರೀಮಂತನೊಬ್ಬನು, ತನಗೆ ೨ ವರ್ಷಗಳಿಂದಲೂ ನಿದ್ರೆಯಿಲ್ಲವೆಂದೂ, ತನ್ನ ಈ ಖಾಯಿಲೆಯನ್ನು ವಾಸಿಮಾಡಿದವನಿಗೆ ಅಪಾರ ದ್ರವ್ಯಕೊಟ್ಟು ಕುಬೇರನ ಪುತ್ರನನ್ನಾಗಿ ಮಾಡುವೆನೆಂದೂ ಪ್ರಕಟಮಾಡಿದ್ದನು. ಆದರೆ ಇದುವರುವಿಗೆ ಅನೇಕರು ಪ್ರಯತ್ನಿಸಿದರೂ ಫಲವಾಗಲಿಲ್ಲ. ಈಗ ಆತನು ನಿರಾಶನಾಗಿದ್ದಾನೆ. ತಾನು ಸಾಯುವವರೆವಿಗೂ ದೇವರಧ್ಯಾನ ಮಾಡುತ್ತಿರುವೆನೆಂದು ನಿರ್ಧರಿಸಿದ್ದಾನೆ. ನಮ್ಮ ಪಂಡಿತರ್ಯಾರಾದರೂ ಒಂದು ಕೈ ನೋಡಬಾರದೆ?

---

## ಪ್ರಪಂಚದಲ್ಲೆಲ್ಲಾ ಎತ್ತರವಾಡ ಹುಡುಗ!

### ಇನ್ನೂ ಬೆಳೆಯುತ್ತಲೇ ಇರುತ್ತಾನೆ!!

ಈಗ ರಾಬರ್ಟ್ ವಾಡ್ಲೊ ಎಂಬ ಹುಡುಗನಿಗೆ ೧೮ ವರ್ಷ ವಯಸ್ಸು. ಅವನು ಎಂಟು ಅಡಿ, ಮೂರು ಅಂಗುಲ ಎತ್ತರವಿದ್ದಾನೆ. ಹೋದವರುಷ ಎರಡು ಅಂಗುಲ ಹೆಚ್ಚಾಗಿ ಬೆಳೆದ! ಇನ್ನೂ ೨೧ ನೇ ವಯಸ್ಸಿನವರೆವಿಗೂ ಬೆಳೆಯುತ್ತಲೇ ಇರುತ್ತಾನಂತೆ!! ಇವನಿಗೆ ಬಟ್ಟೆ ಹೊಲಿಯಬೇಕಾದರೆ ಒಂದು ಥಾನೇ ಬೇಕು! ಕಾಲಿಗೆ ಬೂಟ್ಸು ಸೈಜ್ ೩೬ ನೇದು ಬೇಕು!!

---

ಹಿಂದೀ ಕ್ರಿಕೆಟ್ ಆಟಗಾರರು ಇಂಗ್ಲೆಂಡಿಗೆ ತಲಪಿದ್ದಾರೆ.

ಸೌ|| ಕಮಲಾ ನೆಹರುರವರ ಸ್ಮಾರಕಕ್ಕಾಗಿ ಶ್ರೀ ಭುಲಾಭಾಯಿ ದೇಸಾಯಿಯವರು ೫,೦೦೧ ರೂ. ದೇಣಿಗೆ ಕೊಟ್ಟಿದ್ದಾರೆ.

ಹೊಸ ವೈಸ್ರಾಯರು ಕಳೆದ ತಾ|| ೧೮ ರಲ್ಲಿ ಡೆಲ್ಲಿಯನ್ನು ಸೇರಿದರು. ಅಭೂತಪೂರ್ವವಾದ ಸ್ವಾಗತ ದೊರೆಯಿತು.

ಧೃಢಕಾಯರೂ ಶಕ್ತರೂ ಪುಷ್ಟರೂ ಸಮರ್ಥರೂ ಆಗಿರುವ ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಹತ್ತು ಮಂದಿ ಯುವಕರನ್ನು ಕೇಳಿದರೆ, ಅವರಲ್ಲಿ ಒಂಭತ್ತು ಜನರು ಜೈಲಿಗೆ ಬೇಕಾದರೆ ಹೋಗುವದೇ ಹೊರತು ಸೈನ್ಯಕ್ಕೆ ಸೇರುವುದಕ್ಕೊಪ್ಪುವುದೇ ಇಲ್ಲ. ಯುದ್ಧದ ವಿಷಯದಲ್ಲಿ ನಮ್ಮ ಯುವಕ ಯುವತಿಯರಿಗೆ ಯಾವ ಅಭಿಪ್ರಾಯಗಳು ಮಂದಟ್ಟಾಗಿ ಎಷ್ಟುಮಟ್ಟಿಗೆ ರೂಢಮೂಲವಾಗಿವೆಯೆಂಬುದು ನಮ್ಮ ಮುಂದಾಳುಗಳ ಅವಗಾಹನೆಗೆ ಬಂದಿಲ್ಲ ಎಂಬುದು ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಒಬ್ಬ ಪ್ರೊಫೆಸರವರು ಘಂಟಾಘೋಷವಾಗಿ ಡಂಗಾರಿಸಿದ ಭಾಷಣ.

## ವೃತ್ತಾಂತಗಳು.

ಅಡ್ಡಿಸ್ ಅಬಾಬದ ಮೇಲೆ ಈಗ ಆಗಾಗ್ಗೆ ಇಟಲಿ ವಿಮಾನಗಳು ಹಾರಾಡುತ್ತಲಿವೆ. ಆದರೆ ಬಾಂಬು ಈವರೆಗೆ ಎಸೆದಿರುವದಿಲ್ಲ. ಜನರೆಲ್ಲರೂ ಭಯಭೀತರಾಗಿರುವರು.

ಹೊಸ ತರದ ರ್ಬೆ ಕೋಟುಗಳು ಸಾಮಾನ್ಯ ತರದ ಬಟ್ಟೆಗಳಿಂದ ರಚಿಸಲ್ಪಟ್ಟಿವೆ. ಆದರೆ ರಬ್ಬರಿನ ಬದಲಾಗಿ ಒಂದು ತರದ ಮೇಣವನ್ನು ಇದಕ್ಕೆ ಸವರುವರು. ಇದನ್ನು ಮಡಿಸಬಹುದು. ಇದು ದ್ರಾವಕಗಳಿಂದ ಹಾಳಾಗದು. ಬೆಂಕಿ ನೊಂದಿಸುವವರು ಇದನ್ನು ಉಪಯೋಗಿಸಬಹುದು. ಇದರ ಭಾರವು ಅತೀ ಕಡಮೆ ಮತ್ತು ಮಡಿಸಿದಲ್ಲಿ ಮುಷ್ಟಿಯಲ್ಲಿ ಹಿಡಿಯಬಹುದು.

ಸರ್ವಂಟ್ಸ ಆಫ್ ಇಂಡಿಯಾ ಸೊಸೈಟಿಯ ಅಧ್ಯಕ್ಷ ಕೈ|| ಶ್ರೀ|| ದೇವಧರ ಇವರ ಸ್ಮಾರಕಕ್ಕಾಗಿ ನಿಷ್ಕ್ರಮಣ ವೈಸರಾಯ ಲಾರ್ಡ ವಿಲಿಂಗ್ಡನ್ ಇವರು ೧,೦೦೦ ರೂಪಾಯಿ ದೇಣಿಗೆ ಕೊಟ್ಟಿದ್ದಾರೆ.

ಕೆಲವು ದಿವಸಗಳ ಹಿಂದೆ ಇಟಲಿಯವರು ಅಬಿಸಿನಿಯಾ ಚಕ್ರವರ್ತಿಗಳನ್ನು ಆಶಾಂಗಿ ಸರೋವರದ ಬಳಿಯಲ್ಲಿ ಸೋಲಿಸಿದರೆಂದು ವಾರ್ತೆ ಬಂದಿದ್ದಿತಷ್ಟೆ. ಈಚೆಗೆ ಬಂದ ವಾರ್ತೆಯಲ್ಲಿ ಚಕ್ರವರ್ತಿಗಳು ಪ್ರಚಂಡ ವಿಜಯವನ್ನು ಅದೇ ಸ್ಥಳದಲ್ಲಿ ಪಡೆದಿರುವರೆಂದು ಗೊತ್ತಾಗಿದೆ. ೨೦,೦೦೦ ಯೋಧರೊಡಗೂಡಿ ಚಕ್ರವರ್ತಿಗಳು ಶತ್ರುಗಳ ಮೇಲೆ ಬಿದ್ದು ಹೋರಾಡಿದರು. ಇಟಲಿಯವರು ಸೋತರು. ೩,೦೦೦ ಮಂದಿ ಎರಿಟ್ರಿಯದ ಸಿಪಾಯಿಗಳು ಸತ್ತರು. ೪೦೦ ಮಂದಿ ಇಟಲಿಯ ಬಳಿ ಸಿಪಾಯಿಗಳು ಮಣ್ಣುಪಾಲಾದರು.

ಅಬಿಸಿನಿಯದ ಚಕ್ರವರ್ತಿನಿಯರು ಪ್ರಪಂಚಕ್ಕೇ ನೆ ಮೊರೆಯಿಟ್ಟಿರುವರು. ಅದರಲ್ಲಿ ಇಟಲಿಯವರ ಅಮಾನುಷ ಕ್ರೂರ ವರ್ತನೆಗಳನ್ನು ಸೂಚಿಸಿರುವರು. ತಮ್ಮ ರಾಷ್ಟ್ರವು ಶತ್ರುಗಳ ಬಾಧೆಯಿಂದ ಸುರಕ್ಷಿತವಾಗಿ ಪಾರಾಗಲೆಂದು ಪ್ರಾರ್ಥಿಸಬೇಕಾಗಿ ಪ್ರಪಂಚವನ್ನೇ ಬೇಡಿಕೊಂಡಿರುವರು.

ಅಬಿಸಿನಿಯಾ ಬಾದಶಹ ರಾಸತಫಾರಿ ಇವರು ಪತ್ತೆ ಇಲ್ಲದಾಗಿರುವರೆಂದೂ, ಅವರು ಗಡ್ಡ ಬೋಳಿಸಿಕೊಂಡು ವೇಶಬದಲಾಯಿಸಿ ಎಲ್ಲಿಗಾದರೂ ಅಜ್ಞಾತವಾಸಕ್ಕೆ ಹೋಗಿರಬಹುದೆಂದೂ, ತಾ|| ೧೪ ರಲ್ಲಿ ರೋಮಿನಿಂದ ಬಂದ ವರ್ತಮಾನದಿಂದ ತಿಳಿಯಬರುತ್ತದೆ. ಈಚೆಗೆ ಬಂದ ವರ್ತಮಾನದಂತೆ ಇದು ಸುಳ್ಳೆಂದೂ ಅವರು ಸುರಕ್ಷಿತವಾಗಿರುವರೆಂದೂ ತಿಳಿಯಬಂದಿದೆ.

## ಸಿವಿಲ್ ಸರ್ವಿಸ್ ಸ್ಪರ್ಧೆ

ಗೆಜಿಟ್ಟಿನಲ್ಲಿ ಸಿವಿಲ್ ಸರ್ವಿಸ್ ಪರೀಕ್ಷೆಗೆ ಇರುವ ಸಬ್ಜೆಕ್ಟುಗಳನ್ನು ಪ್ರಕಟಿಸಿರುವುದು ಸರಿಯಷ್ಟೆ. ಇದರಲ್ಲಿ ಕೆಲವು ಪುಸ್ತಕಗಳನ್ನು ಪರೀಕ್ಷೆಗೆ ಮೂರು ತಿಂಗಳ ಮುಂಚೆ ಪ್ರಕಟಿಸಲಾಗುವುದೆಂದು ತಿಳಿಸಲ್ಪಟ್ಟಿದೆ. ಅಲ್ಲಿಯವರೆವಿಗೂ ಈ ಪರೀಕ್ಷೆಗೆ ಓದುತ್ತಿರುವವರು ಸುಮ್ಮನೇ ಕಾದಿರಬೇಕೆ? ಈಗಲೇ ಆ ಪುಸ್ತಕಗಳನ್ನು ತಿಳಿಸಿದರೆ ಆಗುವ ತೊಂದರೆಯೇನು? ಎಲ್ಲರಿಗೂ ಅನ್ವಯಿಸುವ 'ಎ' ಪಾರ್ಟಿನಲ್ಲಿ ಇದು ಸರಿಹೋಗಬಹುದು. ಆದರೆ 'ಬಿ' ಪಾರ್ಟ್‌ನಲ್ಲಿ ಈ ರೀತಿಮಾಡುವುದರಿಂದ, ಮೊದಲೇ ತೊಡಕುಗಳುಳ್ಳ 'ಆರ್ಟ್' ಸಬ್ಜೆಕ್ಟಿನವರಿಗೆ ಮತ್ತಷ್ಟು ತೊಂದರೆ ಮಾಡಿದಂತಾಗುತ್ತದೆ. 'ಆರ್ಟ್ಸ್' ನವರಿಗೂ 'ಬಿ' ಪಾರ್ಟಿನ ಎಲ್ಲಾ ಪುಸ್ತಕಗಳನ್ನೂ ಪ್ರಕಟಿಸಿ ಅವರೂ 'ಸೈನ್ಸ್' ಸಬ್ಜೆಕ್ಟಿನವರಂತೆ 'ಮಾರ್ಕ್ಸ್' ಹೊಡೆಯಲು ಅವಕಾಶ ಮಾಡಿಕೊಡಬೇಕಾದುದು ಅವಶ್ಯಕವಾಗಿದೆ. ಇಲ್ಲದಿದ್ದರೆ, ಈಗಿನಿಂದಲೂ 'ಕಸರತ್ತು' ಮಾಡುತ್ತಿರುವ 'ಆರ್ಟ್ಸ್' ನವರಿಗೆ 'ಟಾಂಗು' ಕೊಟ್ಟಂತಾಗುತ್ತದೆ.

---

## ಮಕ್ಕಳಿನ್ನು ಅವರ ತಂದೆತಾಯಿಗಳೇ ಸೆರೆಯಲ್ಲಿಡುತ್ತಾರೆ!
## ನಾಗರಿಕ ಲಂಡನ್ ಪಟ್ಟಣದಲ್ಲೇ!!

ಲಂಡನ್ ನಗರದಲ್ಲಿ ಇತ್ತೀಚೆಗೆ, ಸಣ್ಣ ವಯಸ್ಸಿನ ತಂದೆತಾಯಿಗಳು ತಮ್ಮ ಮಕ್ಕಳನ್ನು ಮನೆಯಲ್ಲಿ ಕೂಡಿ ಬೀಗ ಹಾಕಿ ಹೊರಗೆ ಬಯಾಸ್ಕೊಪ್, ನಾಟಕ, ಕುಣಿತಗಳೇ ಮುಂತಾದ ಸಂತೋಷಕೂಟಗಳಿಗೆ ಹೊರಟು ಹೋಗುತ್ತಾರೆ. ಮಕ್ಕಳನ್ನು ಬೇಗನೆ ಮಲಗಿಸಿ, ಅವರು ನಿದ್ರಿಸುತ್ತಿರುವಾಗ ಕದ್ದು ಹೊರಟು ಹೋಗುತ್ತಾರೆ. ಮಕ್ಕಳು ಮಧ್ಯರಾತ್ರಿಯಲ್ಲಿ ಎದ್ದು, ತಾವು ಒಬ್ಬರೇ ಇರುವುದನ್ನು ನೋಡಿ ಭಯದಿಂದ ಕಿರಿಚಿಕೊಳ್ಳುತ್ತಾರೆ! ಇದಲ್ಲದೆ ಕೆಲವು ಮಕ್ಕಳಿಗೆ ಅಸ್ಪಿರಿನ್ ಎಂಬ ಔಷಧವನ್ನು ತಿನ್ನಿಸಿ ಅವರು ನಿದ್ರಿಸುವಂತೆ ಮಾಡುತ್ತಾರೆ!! ಈ ಅಮಾನುಷ ಕ್ರೂರ ಕಾರ್ಯವನ್ನು ತಡೆಯಲು ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ.

---

## ಮದುವೆಯಲ್ಲಿಯೂ ಆಕ್ಸ್‌ಮೇಧ ಯಜ್ಞವೇ?

ಬುಡಾಪೆಸ್ಟ್ ಪಟ್ಟಣದ ಹತ್ತಿರ ಐದು ದಂಪತಿಗಳ ಮದುವೆಯಾಯಿತು. ಮದುವೆಯ ಮುಂಚೆ ಒಂದು ಬಿಳಿ ಕುದುರೆಯನ್ನು ಬಲಿಕೊಟ್ಟರು. ವರನ ರಕ್ತನಾಳವನ್ನೂ, ಕನ್ಯೆಯ ರಕ್ತನಾಳವನ್ನೂ ಕತ್ತರಿಸಿ, ಎರಡು ರಕ್ತಗಳೂ ಮಿಶ್ರವಾಗುವಂತೆ ಮಾಡಿದರು. ಇದಲ್ಲವೇ 'ರಕ್ತಸಂಬಂಧ'?

## ಗಮನಿಸಿರಿ! ತಪ್ಪದೇ ಓದಿರಿ!!

ಈ ಪತ್ರಿಕೆಯಲ್ಲಿ ಪ್ರತಿವಾರವೂ ಪ್ರಕಟವಾಗುತ್ತಿರುವ ಜೀವಶಾಸ್ತ್ರದ ವಿಚಾರವಾದ ಲೇಖನಗಳೆಲ್ಲವೂ ಪುಸ್ತಕರೂಪದಲ್ಲಿ ಅಚ್ಚಾಗುತ್ತವೆ.

"ಜೀವಶಾಸ್ತ್ರ ತತ್ತ್ವಸಾರ"

ಅಥವಾ

**ಸತ್ಯವಾದಿಯಲ್ಲಿ?**

ಲೇಖಕರು— ಕೆ' ಯವರು.

ಈ ಗ್ರಂಥದ ಮೊದಲನೆಯ ಮುದ್ರಣಕ್ಕೆ ಮಿತವಾದ ಸಂಖ್ಯೆಯ ಪ್ರತಿಗಳನ್ನು ಮಾತ್ರ ಅಚ್ಚು ಹಾಕುವ ಏರ್ಪಾಡುಮಾಡಿದೆ. ಬೇಕಾದವರು ಮೊದಲೇ ತಮ್ಮ ಹೆಸರನ್ನು ಎಡಿಟರವರಲ್ಲಿ ರಿಜಿಸ್ಟರ್ ಮಾಡಿಸಬೇಕು. ಅಂಥವರಿಗೆ ಗ್ರಂಥವು ಅಚ್ಚಾಗುತ್ತಲೆ ವಿ. ಪಿ. ಮೂಲಕ ಕಳುಹಿಸಲಾಗುತ್ತದೆ. ಬೆಲೆ ರೂ. ೨

ನೊಂದವರೇ! ಮರುಗುತ್ತಿರುವವರೇ!!

ಇಲ್ಲಿ ಗಮನಿಸಿರಿ!!!

ಮರಣಹೊಂದಿದ ನಿಮ್ಮ ಪ್ರಿಯಬಂಧುಗಳು ಎಲ್ಲಿರುವರು? ~~ಅವರೊಡನೆ ಸಂಭಾಷಿಸಬಹುದೆ?~~ ಈ ಅಪೂರ್ವವಾದ ವಿಚಾರವನ್ನು ಮೇಲ್ಕಂಡ ಪುಸ್ತಕವನ್ನು ಕರಿಸಿಕೊಂಡು ಓದಿ ತಿಳಿಯಿರಿ. ಈ ವಿಶೇಷವಾದ ದುಃಖಶಮನವನ್ನು ಹೊಂದದೇ ಇರಬೇಡಿ. ಕೂಡಲೇ ಎಡಿಟರವರಲ್ಲಿ ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿ ರಿಜಿಸ್ಟರ್ ಮಾಡಿಸಿರಿ.

"ಸತ್ಯವಾದಿ ಆಫೀಸು"

ಚಾಮರಾಜಪುರಂ, ಮೈಸೂರು.

---

## ಚಿಂತಿಸಬೇಡಿ

ನಿಮ್ಮ ಅದೃಷ್ಟವು ಏನೋ ಹೇಗೋ ಎಂದು ವೃಥಾ ಚಿಂತಿಸಬೇಡಿ. ಮುಂದೆ ಬರುವುದನ್ನು ತಿಳಿದುಕೊಂಡು ಸುಖಮಾರ್ಗವನ್ನು ಕಲ್ಪಿಸಿಕೊಳ್ಳಿರಿ. ನಿಮ್ಮ ಜಾತಕದ ಸಕಲವನ್ನೋ, ಹುಟ್ಟಿದ ಕಾಲವನ್ನೋ ಇಲ್ಲವೆ ನೀವು ಕಾಗದ ಬರೆಯುವ ಕಾಲವನ್ನೊ ತಿಳಿಸಿರಿ, ನಿಮಗೆ ಬೇಕಾದ ಐದು ಪ್ರಶ್ನೆಗಳನ್ನು ಕೇಳಿರಿ. ತೃಪ್ತಿಕರವಾಗಿ ಉತ್ತರವನ್ನು ಕಳುಹಿಸುವೆವು. ಫೀಜು ಒಬ್ಬರಿಗೆ ೧—೪—೦ ರೂಪಾಯಿ ಮಾತ್ರ

**ತಾಜಕ ಜ್ಯೋತಿಷ್ಯರು,**

೧೦೬ ಚಾಮುಂಡಾಜ ಅಗ್ರಹಾರ, ಮೈಸೂರು

---

## ನೀರಿನಿಂದ! ಹಣವನ್ನು ಶೇಖರಿಸಿ!

ನಿಮ್ಮ ಸೋಡಾ ಫೌಂಟನ್ನನ್ನು ಈಗಲೇ ಕೊಂಡುಕೊಳ್ಳಿ

**H. SASSEN & CO.,**
15 Armenian Street, Post Box 163
**G. T. MADRAS**


# Wanted

Agents with Pay and Allowances to canvass subscribers and advertisers for

# Satyavadi

Apply in person or through post to
The Manager,
Satyavadi Office, Satyavadi Buildings,
Chamarajpuram, Mysore.

---

# shanmukhavilas
# Coffee Club

**Jaganmohan Palace Road**
**M Y S O R E**

— for —

EXCELLENT TIFFIN, & COFFEE

---

**Shiromani NARAYANACHARYA**
**Chowkambha, Benarese.**

S.U.N. & CO.
BENARES CITY.

ಶಾಸ್ತ್ರಿಗಳೇ! ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ- ಇದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನುಫಲ? ಅದನ್ನು ಧರಿಸಿದರೆ, ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು, ಕೀರ್ತಿ, ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿಹೊಂದಿದ ನಮ್ಮ ಕಾಶೀ ಚೌಖಂಭಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ರುದ್ರಾಕ್ಷಿಯೇ ದೊರೆಯುವುದು.

ಸಣ್ಣ ಅಡ್ಡಿ ಪ್ರಮಾಣದ ೫ ಮುಖದ ಕಂಠಿಸರ 1 ಕ್ಕೆ ಆಣೆ 3 ರಿಂದ ರೂ 25 ರವರಿಗೆ; 100 ರುದ್ರಾಕ್ಷಿಗಳುಳ್ಳ ಸರ 1 ಕ್ಕೆ ಆಣೆ 3 ರಿಂದ ರೂ. 25 ರವರೆಗೆ; ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3 ರಿಂದ 50 ರವರಿಗೆ; ಮತ್ತು 3--4--6--7--8 ಮುಖಗಳ ಕಾಳು ಆಣೆ 4 ರಿಂದ ರೂ 10 ರವರಿಗೆ; 9--10--11 ಮುಖಗಳುಳ್ಳ ಕಾಳು 1 ಕ್ಕೆ ರೂ 2 ರಿಂದ 30 ರೂಪರಿಗೆ; 12--13--14 ಮುಖದ ಕಾಳು 1 ಕ್ಕೆ ರೂ 5 ರಿಂದ 100 ರವರಿಗೆ. ಸಣ್ಣ ರುದ್ರಾಕ್ಷಿಗೇ ಅವರೇ ಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ; ದೊಡ್ಡ ರುದ್ರಾಕ್ಷಿಗೇ ಅಡಕೆಗಿಂತ ದೊಡ್ಡದಾಗುತ್ತಾ ಕ್ರಯ ಜಾಸ್ತಿ ಆಗುವುದು. [ವಿವರಕ್ಕೆ ಕಿಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ] 1 ಆಣೆ ಸ್ಟ್ಯಾಂಪು ಕಳುಹಿಸಿದರೆ 3 ಇನಾಮುಗಳು: 1 ವಿಶ್ವೇಶ್ವರ ಪಠ, 1 ಕಾಶೀನಕ್ಷೆ, 1 ಕ್ಯಾಟಲಾಗಿನೊಡನೆ 3 ಇನಾಮುಗಳು-

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ
ಚೌಖಂಭಾ, ಬೆನಾರಿಸ್ [ಕಾಶಿ.

## ಶ್ರೀ ಕೂಡ್ಲಿ ಶೃಂಗೇರಿ ಮಠದ ಪಟ್ಟ ಸ್ವೀಕಾರ

( ಓರ್ವ ಪ್ರಿಯಶಿಷ್ಯರಿಂದ ಬರೆದುಬಂದ ದು )

ಅನಾದಿ ಶಂಕರಾಚಾರ್ಯರ ಮ-ಠ

ಈ ಕೂಡ್ಲಿಮಠ ಶ್ರೀ ಶೃಂಗೇರಿಮಠಕ್ಕೆ ಅನಾದಿಯಾದ್ದು. ಶ್ರೀ ಶಂಕರಾಚಾರ್ಯರ್ರು, ಕಾಶ್ಮೀರದಿಂದ, ಶ್ರೀ ಸರಸ್ವತಿ ಅಮ್ಮನವರನ್ನು ಜಯಸಿ ಕರತಂದಾಗ ಮರಳಲ್ಲಿ ಬರುತ್ತಿದ್ದಾಗ ಈ ಕೂಡ್ಲಿ ಕ್ಷೇತ್ರದಲ್ಲಿ ನಿಂತರು. ಅನಂತರ ಪಾರ್ಥಿಸಿ ಶೃಂಗೇರಿಗೂ ಕರತಂದದ್ದು ಶಂಕರ ವಿಜಯದಲ್ಲಿ ಹೇರಿದೆ.

ಜೀರ್ಣೋದ್ಧಾರ

ಶ್ರೀ ಶೃಂಗೇರಿ ಮಠಕ್ಕೆ ಪ್ರಾಶಸ್ತ್ಯ ದೊರತ ಮೇಲೆ ಈ ಮಠ ದೂರ್ವಾಂಕುರ ನ್ಯಾಯಪ್ರಕಾರ ನಡೆದುಬಂತು. ಶ್ರೀ ವಾಲುಕೇಶ್ವರ ಸ್ವಾಮಿಗಳು, ಈ ಮಠಕ್ಕೆ ಸನ್ಯಾಸ ಸ್ವೀಕಾರಮಾಡಿ ಪಟ್ಟಕ್ಕೆ ಬಂದ ಈ ಮೂರು ವರ್ಷದಿಂದ ಇದರ ಪ್ರಶಸ್ತಿ ಅವರ ಪೂರ್ವಾಶ್ರಮದ ಕರ್ಮನಿಷ್ಠತೆ, ಪಾಂಡಿತ್ಯ, ಬೋಧ ಶಾಕ್ತಿಯ ಚಾತುರ್ಯ ಮಹಿಮೆಯಿಂದ ಉಂಟಾಯಿತು ಮತ್ತು ಶ್ರೀಮಾನ್ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ ಶಿಷ್ಯ ಔದಾರ್ಯತ್ವ ಕೃಪಾಮಹಿಮೆಯಿಂದಲೂ, ಶ್ರೀ ವಾಲುಕೇಶ್ವರಸ್ವಾಮಿಗಳ ವಿದ್ವತ್ ಪಾಂಡಿತ್ಯ ಮಹಿಮೆಯಿಂದ, ಈ ಮಠಕ್ಕೆ ಆಗಿದ್ದ ೨೦-೩೦ ಸಾವಿರ ರೂಪಾಯಿನ ಸಾಲವನ್ನು ನಿರಾಯಾಸವಾಗಿ ೨ ವರ್ಷಕಾಲದಲ್ಲಿ ತೀರಿಸಿದ್ದು ಸರ್ವರಿಗೂ ತಿಳಿದ ಸಂತೋಷವಿಚಾರ. ಈ ವಿಚಾರದಲ್ಲಿ ಶಿಷ್ಯರೆಲ್ಲರೂ ಶ್ರೀಮಾನ್ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಚಿರಋಣಿಯಾಗಿದ್ದಾರೆ. ಪ್ರಕೃತ ಈ ಮಠದ ಘನತೆಗೂ ಪ್ರಶಸ್ತಿಗೂ ನಮ್ಮನ್ನಾಳುವ ರಾಜರೆ ಮುಖ್ಯ ಕಾರಣ. ಇವರ ಔದಾರ್ಯ ಮತ್ತು ಶ್ರೀ ವಾಲುಕೇಶ್ವರ ಸ್ವಾಮಿಗಳ ಪಾಂಡಿತ್ಯವೇ ಮುಖ್ಯ ಕಾರಣ.

ಶಿಷ್ಯ ಸ್ವೀಕಾರ

ಈ ಮಠಕ್ಕೆ ಸ್ವಾಸ್ಥ್ಯಗಳೂ, ಕಪ್ಪಕಾಣಿಕೆ ಶಿಷ್ಯವರ್ಗಸಂಪತ್ತಿ ಬೊಂಬಾಯಿ ಪ್ರಾಂತ್ಯದ ಕರ್ನಾಟಕ ಸೀಮೆಯಲ್ಲಿ ಹೆಚ್ಚು. ಆದ್ದರಿಂದಲೇ ಆ ಶಿಷ್ಯವರ್ಗದವರ ಕೋರಿಕೆಯಂತೆ, ಈ ಮಠದ ಈಗಿರುವ ಸ್ವಾಮಿಗಳು ನಿಶ್ಚಯಾದಾಗ್ಯೂ ಯತ್ನವಿಲ್ಲದೆ ಕೈಲಾಸವಾಸಿಯಾದ ಆ ದೇಶಸ್ಥರಾದ ಬ್ರ॥ಶ್ರೀ॥ ವಿಶ್ವೇಶ್ವರಾಶಾಸ್ತ್ರಿಗಳಿಗೆ ಸನ್ಯಾಸ ಪಟ್ಟಕಟ್ಟಿ ವೈರಾಗಿಗಳಾಗಿದರು. ಈ ಮಠದ ಮೇಲ್ವಿಚಾರಣೆಯನ್ನು ಮೈಸೂರು ಸರ್ಕಾರದವರು ನೋಡಿತ್ತಿದ್ದಾರೆ. ಮಠಕ್ಕೆ ಸಾಲ ತೀರಿ ಆಸ್ತಿಯಾಗಿದೆ. ಈಗ ಮುಂದೆ ಪಟ್ಟಕ್ಕೆ ಬರುವ ಶಿಷ್ಯರು ಉತ್ಸಾಹಿತರಾಗಿ ಅನೇಕರು ಇದ್ದಾರೆ. ಪ್ರಕೃತ ನಿರ್ಯಾಣಹೊಂದಿದ ಸ್ವಾಮಿಗಳ ತಮ್ಮಂದಿರಾದ ಬ್ರ॥ ಶ್ರೀ॥ ವೇ॥ ಗಣೇಶಶಾಸ್ತ್ರಿಗಳ ಮಕ್ಕಳಲ್ಲಿ ಒಬ್ಬ ಒಟ್ಟುಗೆ ಸನ್ಯಾಸ ಪಟ್ಟವಾಗುವ ಉದ್ಯಮ ವಿಶೇಷ ಪ್ರಯತ್ನಗಳು ನಡೆಯುತ್ತಿದೆ ಎಂದು ವದಂತಿ ಹುಟ್ಟಿದೆ. ಮುಖ್ಯ ಶಿಷ್ಯರಾದ ಪಂಡಿತೋತ್ತಮರಾದ ಆ ಕರ್ನಾಟಕ ದೇಶಸ್ಥರಾದ ಬ್ರ॥ ಶ್ರೀ॥ ವೇ॥ ಧಾರವಾಡದ ನಾಗೇಶಶಾಸ್ತ್ರಿಗಳೇ ಎಲ್ಲಾ ವಿಚಾರದಲ್ಲೂ ಈ ಮಠಕ್ಕೆ ಪಟ್ಟ ಸನ್ಯಾಸ ಸ್ವೀಕಾರ ಮಾಡುವದಕ್ಕೆ ಯೋಗ್ಯರಾದವರು.

ಇವರು ಸಂಕೇಶ್ವರ ಮ-ಠ ಮತ್ತು ಶ್ರೀ ನಾರ್ತಾಯಣಸ್ವಾಮಿ ಮಹಾರಾಜರಲ್ಲಿಯೂ, ಅಡಳಿತ ನಡಿಸುವದಕ್ಕೆ ಯೋಗ್ಯರಾಗಿರುವ ಪಟ್ಟ ಶಿಷ್ಯರು, ಮತ್ತು ಸಂಸಾರಿಗಳು. ಇವರನ್ನು ಪಟ್ಟಶಿಷ್ಯರನ್ನಾಗಿ ಮಾಡಿದರೆ ನಮ್ಮನ್ನಾಳುವ ಶ್ರೀಮಾನ್ ನಾಲ್ವಡಿ ಕೃಷ್ಣರಾಜ ಒಡೆಯರು ಈ ಅದಿ ಶಂಕರಮಠವನ್ನು ಮನವಿಟ್ಟು ಜೀರ್ಣೋದ್ಧಾರಮಾಡಿ ನಡೆಸಿದ್ದು ಸಾರ್ಥಕವಾಗುತ್ತದೆ ಎಂಬುವದು ನಿಸ್ಸಂದೇಹವಾದ್ದು. ಹಾಗೆ ಪೈವಾಸುಕೂಲವಾಗದ ಸಂದರ್ಭದಲ್ಲಿ, ಕರ್ಮಠರಾಗಿಯೂ ನಿಷ್ಠುರಾಗಿ ಪಂಡಿತರಾಗಿರುವವರನ್ನು ಆರಿಸಿವದು ಯುಕ್ತ. ಶ್ರೀ ವಾಲುಕೇಶ್ವರ ಸ್ವಾಮಿಗಳ ಹಾಗೆ ಉದ್ದಾನುಪಂಡಿತರು ವಿರಳ. ಮತ್ತು ಪಂಡಿತೋತ್ತಮರಲ್ಲಿ ಅನೇಕರು ಇದ್ದಾಗ್ಯೂ, ಕರ್ಮಠರಾದಾಗ್ಯೂ ಅವರು ವೃದ್ಧಾಪ್ಯಜರಾಯುಕ್ತರು. ಆದ್ದರಿಂದ ಮಧ್ಯವಯಸ್ಕರಾಗಿ ವಿದುರರಾಗಿ, ವಾಗ್ಮಿ ಮತ್ತ ಬೋಧನಾಶಕ್ತಿಯುಕ್ತರಾಗಿ, ನಿಷ್ಠುರಾಗಿ, ಮೇಧಾವಿಗಳಾಗಿರುವರನ್ನು ಆರಿಸಿ ಪಟ್ಟಕಟ್ಟುವದು ಯುಕ್ತ. ಇದು ಈ ಮ-ಠದ ಉತ್ತರೋತ್ತರ ಅಭಿವೃದ್ಧಿಗೂ, ಶ್ರೀಮನ್ಮಹಾರಾಜರವರು ಮಾಡಿದ ಜೀರ್ಣೋದ್ಧಾರದ ಕೃತಜ್ಞತೆಗೂ ಯುಕ್ತವಾಗುತ್ತದೆ. ಹಾಗಲ್ಲದೆ, ಕರ್ನಾಟಕ ದೇಶಯೇ ಆಗಬೇಕು (ದೇಶಸ್ಥರು) ಇನ್ಯಾವ ಪಂಚದ್ರಾವಿಡರೂ ಆಗಕೂಡದೆಂಬ ದುರಭಿಮಾನ ಈ ಮಠದ ಮತ್ತು ಸನಾತನ ಧರ್ಮದ ದೃಷ್ಟಿಯಿಂದಯಕ್ತವಲ್ಲ. ಹಿಂದೆ ಶ್ರೀ ಆದಿ ಶಂಕರಾಚಾರ್ಯರು ಶೃಂಗೇರಿ ಪೀಠಕ್ಕೆ ಮಂಡನಮಿಶ್ರರಿಗೆ (ಗೌಡಬ್ರಾಹ್ಮಣ) ಪಟ್ಟಸನ್ಯಾಸ ಕೊಡಲಿಲ್ಲವೇ. ಮುಖ್ಯ ಶಿಷ್ಯರ ಮತ್ತು ಸರಕಾರದವರ ದೃಷ್ಟಿ ಧ್ಯೇಯಗಳು, ಮಠದ ಮತ್ತು ಧರ್ಮದ ಪುರೋಭಿವೃದ್ಧಿಗೆ ಪಟ್ಟ ಶಿಷ್ಯರನ್ನು ಆರಿಸುವದಕ್ಕೆ ಕಾರಣವಾಗಬೇಕು. ಗಂಡ ಹೆಂಡರ ಜಗಳದಲ್ಲಿ ಕೂಸು ಬಡವಾಯಿತು ಎಂಬ ನಾಣ್ನುಡಿಯಂತೆ ಸ್ವಾರ್ಥತೆ ಮತ್ತು ಶಿಷ್ಯರ ಬಿನ್ನಾಭಿಪ್ರಾಯದಿಂದ ಲುಪ್ತವಾಗಬಾರದೆಂಬ ಆಶೆ

ಈಗ ಮ-ಠಗಳ ಮತ್ತು ಸನಾತನಧರ್ಮವಿಚಾರದಲ್ಲಿ ಕ್ಷೀಣದೆತೆ ಒಂದಿದ್ದರೂ ಕಾಲಕ್ರಮದಲ್ಲಿ ಇದೇ

# ವರ್ತಮಾನಗಳು

ಗೌರ್ನರ್ ಜನರಲ್ ಇಕ್ ಕೌನ್ಸಿಲ್‌ರವರು ಸ್ಟೇಟು ಕೌನ್ಸಿಲ್‌ನ ನಾಮನಿರ್ದೇಶನುಗಳಿಗಾಗಲೀ ಜುನಾವಣೆಗಾಗಲಿ ಸ್ತ್ರೀಯರು ಅರ್ಹರೆಂದು ನಿರ್ಧಾರವಮಾಡಿರುವರು. ಸ್ತ್ರೀಯರ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳಲು ಅವರಿಗೆ ಅವಕಾಶವು ದೊರೆದಂತಾಯಿತು.

ಪಷಾವರಿನ ಫ್ರಾಂಟಿಯರ್ ಹೈಸ್ಕೂಲಿನಲ್ಲಿ ವಿದ್ಯಾರ್ಥಿಯೊಬ್ಬನು ಹೆಡ್‌ಮಾಸ್ಟರನ್ನು ಕತ್ತಿಯಿಂದ ತಿವಿದನು. ಸಹಾಯಕ್ಕೆ ಬಂದ ಮತ್ತೊಬ್ಬ ಉಪಾಧ್ಯಾಯನನ್ನೂ ಕೂಡ ತಿವಿದ್ದನು. ಮೇಲಿನ ತರಗತಿಗೆ ಆ ಹುಡುಗನನ್ನು ಪ್ರಾಸ್ತು ಮಾಡಿಸದೆ ಹೋದುದೇ ಹೀಗೆ ಮಾಡಲು ಕಾರಣವಂತೆ.

ಕೋರ್ಟ್ ಸಾಕ್ಷ್ಯಗಳಲ್ಲಿ ಬೆರಳಿನ ಮುದ್ರೆಗಳಿಗೆ ಪ್ರಾಮುಖ್ಯತೆಯನ್ನು ಕೊಡುವದು ತಪ್ಪೆಂದು ಈಜಿಪ್ತಿಗೆ ಪರೀಕ್ಷೆಯ ಮೂಲಕ ಶಾಸ್ತ್ರಜ್ಞರು ತಿಳಿಸಿರುವರು. ಅಸತ್ಯ ಸಿದ್ಧಾಂತಗಳು ಎಂದಾದರೂ ಸತ್ಯವಾದುವೇ ?

ಅಷ್ಟಮ ಎಡ್ವರ್ಡ್ ರಾಜರವರು ಗ್ರ್ಯಾಂಡು ಮಾಸ್ಟರ್ ಆಫ್ ದಿ ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್ ಆಗಿ ವೇರಿ ರಾಣಿಯವರನ್ನು ಗೌರವಿಸಿರುವರು. ಸ್ತ್ರೀಯರಿಗೆ ಯಾರಿಗೂ ಇದುವರೆಗೂ ಈ ಗೌರವವು ಲಭಿಸಿರಲಿಲ್ಲ.

ಸರ್ ಸಿ ವಿ. ರಾಮರ್‌ರವರನ್ನು ರಾಯಲ್ ಐರಿಷ್ ಅಕಾಡೆಮಿಯ ಸೈನ್ಸು ಶಾಖೆಯಲ್ಲಿ ಗೌರವ ಸಭ್ಯರಾಗಿ ಆರಿಸಿರುವರು

---

ಯುಕ್ತವೆಂದು ಶಾಸ್ತ್ರಸಮ್ಮತವಾಗಿದೆ ಎಂಬುವದು ಈಗಿನ ಭೌತಿಕ ಶಾಸ್ತ್ರ, ತತ್ವಶಾಸ್ತ್ರ, ದಿಗದಂತಿಗಳಾದ ಶ್ರೀಮಾನ್ ಆಲಿವರಲಾಡ್ ಬೊಸರು, ಪ್ರಫುಲ್ಲಚಂದ್ರರೇ, ರಾಧಕೃಷ್ಣ, ಸಿ. ವಿ ರಾಮರ್ ಮುಂತಾದವರ ಪ್ರಯೋಗ ಭಾಷಣ ಗ್ರಂಥಗಳಿಂದ ಹೊರಬೀಳುತ್ತೆಂಬುದು ಸುಳ್ಳೇ ? ಆದ್ದರಿಂದ ಮಠಾಧಿಪತಿಗಳು ಕಾಲದೇಶ ಪಾತ್ರವರಿತು ದೇಶಭಾಷಾದಲ್ಲಿ ನುರಿತು ಶಿಷ್ಯರಿಗೆ ಬೋಧಿಸಿ ನಮ್ಮ ನಮ್ಮ ಸನಾತನ ಧರ್ಮವನ್ನು ಅನುಸಂಧಿಸುವಂತೆ ಆಧುನಿಕರ ಮನಸ್ಸನ್ನು ಸೆಳೆಯುವವರು ಮಠಾಧಿಪತಿಗಳಾಗುವದು ಯುಕ್ತ. ಪಟ್ಟಶಿಷ್ಯರನ್ನು ಈ ಮಠಕ್ಕೆ ಆರಿಸುವದರಲ್ಲಿ ಶಿಷ್ಯರಿಗೂ ಘನಸರ್ಕಾರಕ್ಕೂ ಮತ್ತು ಶ್ರೀಮನ್ಮಹಾರಾಜರವರಿಗೂ ಇರುವ ಕರ್ತವ್ಯವು ಯಾವ ವಿಧದಲ್ಲೂ ನ್ಯೂನತೆ ಬರಲಾರದೆಂದು ನಂಬಿದೆ.

# ಶಕ್ತಿಸಾಧನೆಯ ಸುಲಭೋಪಾಯಗಳು.

ಶಕ್ತಿಯೂ ಆರೋಗ್ಯವೂ ಪರಸ್ಪರ ಸಂಬಂಧವಿರುವ ಎರಡು ತತ್ವಗಳು. ಆರೋಗ್ಯವಿಲ್ಲದೇ ಶಕ್ತಿಯು ಹೆಚ್ಚಲಾರದು. ಶಕ್ತಿಯು ಇಲ್ಲದಿದ್ದರೆ ಆರೋಗ್ಯವಿರುವ ಸಂಭವವೂ ಕಡಮೆ. ಆದ್ದರಿಂದ ಮನುಷ್ಯನಿಗೆ ಶರೀರದಲ್ಲಿ ಆರೋಗ್ಯವೂ ಶಕ್ತಿಯೂ ಅತಿ ಮುಖ್ಯವಾದುವು ; ಇವೆರಡೂ ಇದ್ದಲ್ಲಿ ಮನುಷ್ಯನು ಯಾವ ಕೆಲಸವನ್ನಾದರೂ ನಿರಾಯಾಸವಾಗಿ ಮಾಡಬಲ್ಲನು.

ಹೆಣವನ್ನು ಸಂಪಾದಿಸುವುದಕ್ಕಾಗಿ ದುಡಿಯಬೇಕಾದರೆ ಶಕ್ತಿಯೂ ಆರೋಗ್ಯವೂ ಇಲ್ಲದೆ ಸಾಧ್ಯವಿಲ್ಲ. ಪಾರಮಾರ್ಥಿಕ ದೃಷ್ಟಿಯಿಂದ್ದನ್ನೋಡಿದರೂ ವ್ರತ, ನಿಯಮ, ಭಗವದ್ಧ್ಯಾನ, ಯೋಗಾಭ್ಯಾಸಾದಿಗಳನ್ನು ಮಾಡಿ ಮೋಕ್ಷವನ್ನು ಹೊಂದುವುದಕ್ಕೂ ಶಕ್ತಿಯು ಅತ್ಯಗತ್ಯವಾದುದು. ಸಾಂಸಾರಿಕ ರೀತಿಯಿಂದ ಇಹಲೋಕ ಸುಖಾಪೇಕ್ಷಿಗಳಾದವರಿಗೆ ತಮ್ಮ ಇಚ್ಛಿತವಾದ ವಿಷಯ ಸುಖಾದಿಗಳ ಉಪಭೋಗಕ್ಕಂತೂ ಸಂಪೂರ್ಣವಾಗಿ ಶಕ್ತಿಯು ಇರಲೇಬೇಕು. ಮಾನವನಿಗೆ ಅದೊಂದು ಜೀವನದ್ದ ತತ್ವವಾದ ಶಕ್ತಿಯು ಯಾರಿಗೆ ಬೇಡ ? ಎಲ್ಲರಿಗೂ ಬೇಕೇಬೇಕು. ವಿದ್ಯಾರ್ಥಿಗಳಿಗೆ ತಾವು ಕಲಿತ ಪಾಠಗಳನ್ನು ಜ್ಞಾಪಕದಲ್ಲಿ ನಿಲ್ಲುವಂತೆ ಮಾಡುವುದು ಶಕ್ತಿ ! ಯುವಕ ಯುವತಿಯರಿಗೆ ತಮ್ಮ ಯೌವನದ ಪ್ರಯೋಜನವನ್ನು ಸಂಪೂರ್ಣವಾಗಿ ಹೊಂದುವಂತೆ ಮಾಡುವುದು ಶಕ್ತಿ ! ವೃದ್ಧರಿಗೂ ಕೂಡ ಶರೀರವು ದೃಢವಾಗಿ ಬಲಹೀನತೆ ಇಲ್ಲದಂತೆ ಕಾಪಾಡುವುದೂ ಶಕ್ತಿ ! ಸಂಗೀತಗಾರರು ತಮ್ಮ ಮನೋಧರ್ಮವನ್ನು ಯಥಾಸ್ಥಿತಿಯಾಗಿ ವ್ಯಕ್ತಪಡಿಸಿ ತಮ್ಮ ವಿದ್ಯೆಯ ಸಾಮರ್ಥ್ಯವನ್ನು ಸಭಿಕರಿಗೆ ತೋರುವಂತೆ ಮಾಡಲು ಶಾರೀರವು ಏಕರೀತಿಯಲ್ಲಿರುವಂತೆ ಮಾಡುವುದು ಶಕ್ತಿ ! ದೇಶದೇಶಾಂತರಗಳಲ್ಲಿ ಪ್ರಯಾಣಪಾಡುವ ವ್ಯಾಪಾರಸ್ಥರೇ ಮೊದಲಾದವರ ಆರೋಗ್ಯವು ಕೆಡದಂತೆ ಮಾಡುವುದೂ ಶಕ್ತಿಯೇ ! ಹೆಚ್ಚೇಕೆ --ಮನುಷ್ಯ ಮಾತ್ರದವರಿಗೆ ಯಾವ ವಿಧದಿಂದ ನೋಡಿದರೂ ಶಕ್ತಿಯು ಅವಶ್ಯಕವು.

ಶಕ್ತಿಯಿದ್ದವನಿಗೆ ಎಲ್ಲವೂ ಸಾಧ್ಯವು. ಶಕ್ತಿಯ ದೆಸೆಯಿಂದ ಭಾರತದಲ್ಲಿ ಮಹಾವೀರನೆಂದು ಪ್ರಸಿದ್ಧಿಪಡೆದ ಅರ್ಜುನನು ಪರಮೇಶ್ವರನೊಡನೆ ಯುದ್ಧಮಾಡಿ ಆತನನ್ನು ಒಲಿಸಿಕೊಂಡನು. ಶಕ್ತಿಯ ದೆಸೆಯಿಂದಲೇ ಭೀಮನು ಅತ್ಯಂತ ಪರಾಕ್ರಮಶಾಲಿಗಳಾದ ಜರಾಸಂಧ ದುರ್ಯೋಧನಾದಿಗಳನ್ನು ಗೆದ್ದನು. ಶಕ್ತಿಯೇ ಹನುಮಂತನಿಗೆ ಬಲಾಢ್ಯನೆಂಬ ಕೀರ್ತಿಯನ್ನು ತಂದಂಥಾದ್ದು. ರಾವಣ ಹಿರಣ್ಯಾಕ್ಷ ಮೊದಲಾದವರು ದೇವತೆಗಳನ್ನು ಕೂಡ ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಸಹಾಯಮಾಡಿದುದೂ ಶಕ್ತಿಯೇ ! ಶಕ್ತಿಯ ದೆಸೆಯಿಂದ ನೆಪೋಲಿಯನನು ಪ್ರಪಂಚವನ್ನೇ ಗೆಲ್ಲುವ ಸಾಹಸಿಯೆಂದು ಖ್ಯಾತಿಗೊಂಡಿದ್ದು. ಮೈಸೂರು ಹುಲಿ ಎಂದು ಪ್ರಸಿದ್ಧನಾದ ಟಿಪ್ಪುಸುಲ್ತಾನನ ಕೀರ್ತಿಗೂ ಶಕ್ತಿಯೇ ಮೂಲಕಾರಣವಲ್ಲವೇ ?

ಇಂತಹ ಅದ್ಭುತವಾದ ಮತ್ತು ಅಸಾಧಾರಣವಾದ ಮಹಿಮೆಯುಳ್ಳದ್ದು ಶಕ್ತಿಯು. ಶಕ್ತಿವಂತರಾಗಿಯೂ, ಆರೋಗ್ಯವಂತರಾಗಿಯೂ ಇರಬೇಕೆಂಬ ಆಶೆಯು ಪ್ರತಿಯೊಬ್ಬರಿಗೂ ಉಂಟಾಗುವುದು ಸಹಜವಷ್ಟೆ. ಪೂರ್ಣ ಬಲಶಾಲಿಗಳಾಗಿಯೂ, ಆರೋಗ್ಯವಂತರಾಗಿಯೂ ಇರುವುದಕ್ಕೆ ನಮ್ಮ ಸುಪ್ರಸಿದ್ಧವಾದ **ಶಕ್ತಿಸುಧೆ**ಯನ್ನು ಸೇವಿಸಿರಿ. ಇದರ ಸೇವನೆಯು ನಿಮ್ಮನ್ನು ಆರೋಗ್ಯವಂತರಾಗಿಯೂ, ವಜ್ರಕಾಯಕರರನ್ನಾಗಿಯೂ ಮಾಡುವುದು. ಇದು ಪ್ರಾಚೀನ ವೈದ್ಯಗ್ರಂಥಗಳ ಶೋಧನೆಯಿಂದ ತಯಾರಿಸಲ್ಪಟ್ಟಿದೆ. ಅನೇಕರು ಇದನ್ನು ಸೇವನೆಮಾಡಿ ತುಂಬಾ ಪ್ರಯೋಜನಹೊಂದಿ ಪ್ರಶಂಶಿಸಿರುತ್ತಾರೆ. ಇದರ ಶ್ರೇಷ್ಠತೆಯ ಸಲುವಾಗಿ ಅನೇಕ ವಸ್ತುಪ್ರದರ್ಶನಗಳಲ್ಲಿ ವೆಂಡಲುಗಳೂ, ಸರ್ಟಿಫಿಕೇಟುಗಳೂ ಬಂದಿರುತ್ತವೆ. ಯಾವ ಮತಾಚಾರಕ್ಕೂ ವಿರುದ್ಧವಿಲ್ಲದ, ಕೇವಲ ಶಕ್ತಿವರ್ಧಕ—ಮತ್ತು ಪೌಷ್ಟಿಕಗುಣಗಳುಳ್ಳ ಅಮೋಘ ವನಸ್ಪತಿಗಳಿಂದ ತಯಾರಾದುದು. ಇದರಲ್ಲಿ ಅಪಾಯಕರವಾದ ಯಾವ ವಸ್ತುವೂ ಇಲ್ಲ.

ಶಕ್ತಿಸುಧೆಯನ್ನು ಸೇವಿಸುವ ಕಾಲದಲ್ಲಿ ಆಹಾರ ಪಾನೀಯ ನಿಯಮವಾಗಲೀ, ಕಠಿಣ ಪಥ್ಯವಾಗಲಿ ಇಲ್ಲ ಸರ್ವಸಾಧಾರಣ ಆರೋಗ್ಯ ನಿಯಮಗಳನ್ನು ಅನುಸರಿಸಿದರೆ ಸಾಕು ; ಯುಕ್ತ ಗುಣವು ಸ್ವಲ್ಪ ಕಾಲದಲ್ಲಿಯೇ ಕಂಡು ಬರುವುದು.


# ಸತ್ಯವಾದಿ

ವಾರಪತ್ರಿಕೆಯನ್ನು ಓದಿ ಆನಂದಿಸಿರಿ

- ವಿವಿಧ ವಿಚಾರಗಳಿಂದ ವಿರಾಜಿಸುತ್ತದೆ.

ತಾತ್ಕಾಲಿಕ ಉಪಯುಕ್ತ ಮತ್ತು ದೇಶಹಿತದಾಯಕವಾದ
ಅನೇಕಾನೇಕ ವಿಷಯಗಳನ್ನೂ
ರಸವತ್ತಾದ ಕಥೆಗಳನ್ನೂ, ಹಾಸ್ಯಲಹರಿಯನ್ನೂ,
ದೇಶ ವಿದೇಶ ವರ್ತಮಾನಗಳನ್ನೂ ಒಳಗೊಂಡಿರುತ್ತದೆ.
ಸನಾತನಧರ್ಮವಿಚಾರಗಳು ಪ್ರಕಟಿಸಲ್ಪಡುವುವು.

ವಾರ್ಷಿಕ ಚಂದ

ಸ್ಥಳಕ್ಕೆ 1— 0—0
(ಅಂಚೆವೆಚ್ಚ ಸೇರಿ) ಪರಸ್ಥಳಕ್ಕೆ 1—10—0 ಬಿಡಿಪ್ರತಿ ೩ ಪೈ

ನಮ್ಮಲ್ಲಿ ಎಲ್ಲಾ ವಿಧವಾದ ಮುದ್ರಣ ಕೆಲಸಗಳೂ ಸುಲಭ ಛಾರ್ಜಿಗೆ ಸಕಾಲಕ್ಕೆ ಮಾಡಿಕೊಡಲ್ಪಡುತ್ತವೆ.

ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು.



# ಶಕ್ತಿಸುಧಾ

ಬಾಲ್ಯದಲ್ಲಿ ಅವಿಚಾರದ ದೆಸೆಯಿಂದಲಾಗಲಿ, ಅತಿ ಸಂಭೋಗದಿಂದಾಗಲೀ ವೀರ್ಯವನ್ನು ಕಳೆದುಕೊಂಡು, ತೇಜೋಹೀನರೂ, ಬಲಹೀನರೂ ಆದವರಿಗೆ "**ಶಕ್ತಿಸುಧೆ**" ಯು ನವತೇಜಸ್ಸನ್ನೂ ಬಲಶುಷ್ಟಿ ಪುಷ್ಟಿಯನ್ನೂ ಉಂಟುಮಾಡುತ್ತದೆ. ಇದು ಸಕಲ ವಿಧವಾದ ಧಾತುವಿಕಾರಗಳಿಗೆ ರಾಮಬಾಣವು

ಸಹಜವಾದ ಅಶಕ್ತತೆಯಿಂದಾಗಲೀ, ವಯೋಧರ್ಮದಿಂದಾಗಲೀ, ಇಂದ್ರಿಯ ದೌರ್ಬಲ್ಯವನ್ನು ಹೊಂದಿ, ಮನೋವ್ಯಥೆಯಿಂದ ಪೀಡಿತರಾದವರಿಗೆ "**ಶಕ್ತಿಸುಧೆ**" ಯು ನವಚೈತನ್ಯವನ್ನೇ ಉಂಟುಮಾಡಿ, ಉತ್ಸಾಹದಿಂದ ಸುಖವನ್ನು ಅನುಭವಿಸಿ ಆನಂದಪಡಲು ಸಹಾಯಮಾಡುತ್ತದೆ.

"**ಶಕ್ತಿಸುಧೆ**" ಯು ರಕ್ತವೃದ್ಧಿಯನ್ನೂ ಧಾತುಪುಷ್ಟಿಯನ್ನೂ ಉಂಟುಮಾಡುವುದು. ಪ್ರತಿಯೊಬ್ಬರೂ, ತಮ್ಮ ತಮ್ಮ ಕೆಲಸಗಳನ್ನು ಆಯಾಸವಿಲ್ಲದೆ ಮಾಡುವಂತೆ ಉತ್ಸಾಹವನ್ನು ತಂದುಕೊಡುತ್ತದೆ.

ಸ್ತ್ರೀಯರು ಮುಟ್ಟಾಗುವ ಕಾಲದಲ್ಲಿ ಒರುವ ಸೊಂಟನೋವು, ಹೊಟ್ಟೆನೋವು, ಅಕ್ರಮಸೂತಕವನ್ನೂ, ನಿಶ್ಯಕ್ತಿಯನ್ನೂ ಗುಣಪಡಿಸಿ ಅವರ ನೈಜವಾದ ಸೌಂದರ್ಯವನ್ನು ವೃದ್ಧಿಮಾಡುವುದು.

ವಿದ್ಯಾರ್ಥಿಗಳು ಪಾಠಗಳನ್ನು ಚೆನ್ನಾಗಿ ಕಲಿಯುವುದಕ್ಕೂ, ಕಲಿತದ್ದನ್ನು ಮರೆತುಹೋಗದಂತಹ ಒಳ್ಳೆಯ ಜ್ಞಾಪಕಶಕ್ತಿಯಿರುವಂತೆ ಮೆದುಳಿಗೆ ಶಕ್ತಿಯನ್ನು ಕೊಡುವುದಕ್ಕೂ "**ಶಕ್ತಿಸುಧೆ**" ಯು ವರಪ್ರಸಾದವು

ಅಜೀರ್ಣ, ಅಗ್ನಿಮಾಂದ್ಯ ಮಲಬದ್ಧತೆ, ಇತ್ಯಾದಿ ಸಾಮಾನ್ಯ ಪಿಡಾಯಿಲೆಗಳು ಈ "**ಶಕ್ತಿಸುಧೆ**" ಯನ್ನು ಉಪಯೋಗಿಸುವವರಿಗೆ ಇರುವುದೇ ಇಲ್ಲ.

ಆರೋಗ್ಯವನ್ನು ಕಾಪಾಡಿ ಶಕ್ತಿಯನ್ನು ಹೆಚ್ಚಿಸುವದರಲ್ಲಿ ಅವ್ಯರ್ಥಪಾಯವಾದ "**ಶಕ್ತಿಸುಧೆ**" ಯನ್ನು ಸೇವಿಸಿ ಸರ್ವರೂ ಪ್ರಯೋಜನ ಹೊಂದಿರಿ.

ಬೆಲೆ ಒಂದು ರೂಪಾಯಿ. ಟಪಾಲು ಬೇರೆ. ಚಿಕ್ಕ ಡಬ್ಬಿ 4 ಆಣೆ

ವಿಳಾಸ,— ಸತ್ಯವಾದಿ ಬಿಲ್ಡಿಂಗ್ಸ್, ಮೈಸೂರು

Weekly Newspaper

# SATYAVADI

Every Wednesday

MYSORE (Founded 1917) 22—4—36

ಕಛೇರಿಯಲ್ಲಿ ಹಗಲೆಲ್ಲ ದುಡಿದ ಬಳಿಕವಾಗಲಿ,

ದಿನಚರಿಯ ವ್ಯಾಯಾಮಗಳು ಪೂರೈಸಿದನಂತರವಾಗಲಿ,

ಅಥವ ಧೂಳು ಮತ್ತು ಬಿಸಿಲಿನಲ್ಲಿ ವ್ಯಾಪಾರಗಳನ್ನು ಮುಗಿಸಿದಮೇಲಾಗಲಿ

ದಣಿದ ದೇಹವನು

ಯಥಾಸ್ಥಿತಿಗೆ ತರಲು

ಮೈಸೂರು ಗಂಧದ ಸಾಬೂನಿನ

ಶಕ್ತಿವರ್ಧಕ ಸ್ನಾನಕ್ಕೆ

— ಸರಿಸಮವಾದುದು ಮತ್ತಾವುದೂ ಇಲ್ಲ —

ಮತ್ತು, ಇದು ಅತ್ಯಲ್ಪ ಬೆಲೆಯುಳ್ಳದ್ದಾಗಿದೆ.

ಅರುಣೋದಯದ

ವಿಜಯನಗರಸಾಮ್ರಾಜ್ಯ ಸಂಚಿಕೆಯು

ತನ್ನ ಎಲ್ಲ ವೈಭವದೊಂದಿಗೆ ಬೇಗನೆ

ನಿಮ್ಮಗರ ಕೈಸೇರುವುದು.

ಅಖಿಲ ಕರ್ನಾಟಕದ್ದೊಳಗಿನ ವಿಖ್ಯಾತ ಸಾಹಿತಿಗಳಿಂದ ಬರೆಯಲ್ಪಟ್ಟ ವಿದ್ವತ್ತಾಪ್ರಚುರವಾದ ಲೇಖನಗಳಿಂದ ಕೂಡಿದ ಮತ್ತು ವಿವಿಧ ವಿಜಯನಗರ ಸಾಮ್ರಾಜ್ಯದ ವೈಭವವನ್ನು ವ್ಯಕ್ತಪಡಿಸುವ ಅನೇಕ ಅಂದವಾದ ಚಿತ್ರಗಳನ್ನೊಳಗೊಂಡ, ಬರಹಗಾರರ ಅಲ್ಪ ಪರಿಚಯ ಹಾಗು ಭಾವಚಿತ್ರಗಳಿಂದಲೂ ಶೋಭಿಸುವ ಅತ್ಯಂತ ಮಹತ್ವಪೂರ್ಣವಾದ ಹಾಗೂ ಕನ್ನಡಿಗರಿಗೆ ಅತ್ಯಂತ ಅಭಿಮಾನದ ವಿಷಯವಾಗಿರುವ ಜಯಕರ್ನಾಟಕದ ಆಕಾರದ ೨೫೦—೨೫೫ ಪುಟಗಳನ್ನು ಮಿಕ್ಕಿ ಹೊರಡುತ್ತಿರುವ ಹೆಬ್ಬೊತ್ತಿಗೆಯ ಬೆಲೆಯು ಕೇವಲ ೨ ರೂಪಾಯಿ

ಅರುಣೋದಯದ ಚಂದಾದಾರರಿಗೆ ೧—೮—೦ ಮಾತ್ರ

ಬೇಗನೆ ಆರ್ಡರ್‌ಕೊಟ್ಟು ಸಂಚಿಕೆಯನ್ನು ಕಾದಿಡಲಿಕ್ಕೆ ತಿಳಿಸಬೇಕು.

ಜಾಹೀರಾತುಗಾರರು ಬೇಗನೆ ತಮ್ಮ ತಮ್ಮ ಜಾಹೀರಾತುಗಳನ್ನು ಅಡ್ವಾನ್ಸ್ ಹಣದೊಂದಿಗೆ ಕಳಿಸಬೇಕೆಂದು ಕೋರುತ್ತೇವೆ.

ಕರ್ನಾಟಕದ ಮುಖ್ಯ ಮುಖ ಕೇಂದ್ರಗಳಲ್ಲಿ ಅದರ ಪ್ರಚಾರಕ್ಕಾಗಿ ಸಬೆಂಟರು ಬೇಕು.

ನೂರಕ್ಕೆ ೧೫ ೨ ೨೦ ವರೆಗೆ ಕಮಿಷನ್ ಕೊಡಲಾಗುವುದು ಹೊರತಾಗಿ ೨೫ ರೂ. ಬಹುಮಾನ ಆಕರ್ಷಕ ಯೋಜನೆ

ಡಿವಾಜಿಟ್ ಹಣವಿಡಲು ಸಮರ್ಥರಾದ ಜನರಷ್ಟೇ ಉತ್ತರಕ್ಕಾಗಿ ೧ ಆಣೆ ಸ್ಟ್ಯಾಂಪಸ್ಸಿಟ್ಟು ವಿಶೇಷ ಮಾಹಿತಿಗಾಗಿ ಬರೆದುಕೊಳ್ಳಬೇಕು. ಮ್ಯಾನೇಜರ,

ಅರುಣೋದಯ, ಬೆಳಗಾವಿ.

Edited, Printed & Published by M. S. Krishna Rao, at the Satyavadi Press, Satyavadi Buildings, Chamaraj Agrahar, Mysore.

**Sadhana Aushadalaya**
**Dacca (Bengal)**

ಸಾನಧ
ಔಷಧಾಲಯ, ಡೆಕ
ರ

ಅಧ್ಯಕ್ಷರು--ಭಾಗಲ್ಪುರದ ಮಾಜಿ ರಸಾಯನ ಶಾಸ್ತ್ರ ಪಂಡಿತರಾಗಿದ್ದ ಮ॥ ಜೋಗೀಷಚಂದ್ರ ಘೋಸು ಎಂ. ಎ. ಎಫ್. ಸಿ ಎಸ್. ಲಂಡನ್.

ಆಯುರ್ವೇದ ಶಾಸ್ತ್ರಕ್ಕೆ ಅನುಸಾರವಾಗಿ ಔಷಧಗಳು. ತಯಾರಿಸಲ್ಪಡುತ್ತವೆ. ಕ್ಯಾಟಲಾಗು ಉಚಿತವಾಗಿ ಕಳುಹಿಸಲ್ಪಡುತ್ತೆ. ರೋಗ ವಿವರಣೆಸ್ನು ತಿಳಿಸಿದರೆ ಛಾರ್ಜಿಲ್ಲದೆ ಸಲಹೆ ಕೊಡಲ್ಪಡುತ್ತೆ.

**ಮಕರಧ್ವಜ**—ಸಕಲ ರೋಗಗಳನ್ನು ನಿವಾರಿಸುತ್ತದೆ. ಸರ್ವಾಂಗ ವಿಶ್ವವಾದದ್ದು. ವಾತ, ಪಿತ್ತ, ಕಫವನ್ನು ಸಮಪಡಿಸಿ, ದೇಹಕ್ಕೆ ಶಕ್ತಿಯನ್ನೂ, ಆರೋಗ್ಯವನ್ನೂ ಉಂಟುಮಾಡುತ್ತದೆ. ಬೆಲೆ ತೊಲಾ ೪ ರೂಪಾಯಿ.

**ಸರೀಬಾದಿಸನ್**—ಪ್ರಮೇಹ. ಸವಾಯಿ ರೋಗಗಳಿಗೆ ಅಮೋಘ ಔಷಧವಾದ ರಸ, ವಿಷವನ್ನು ಪರಿಹರಿಸುತ್ತದೆ. ಎಲ್ಲಾ ಮೂತ್ರ ರೋಗಗಳನ್ನೂ ನಿವಾರಿಸುತ್ತದೆ, ರಕ್ತವನ್ನು ಶುದ್ಧಿಪಡಿಸುತ್ತದೆ. ಬೆಲೆ ಸೇರು ೩ ರೂಪಾಯಿ.

**ಶುಕ್ರಸಂಜೀವಿನಿ**—ನಪುಂಸಕತ್ವ, ಧಾತು ಕ್ಷೀಣತೆ ಮುಂತಾದ ಧಾತ ವಿಕಾರ ರೋಗಗಳನ್ನೂ ಗುಣಪಡಿಸುವ ಶಕ್ತಿವರ್ಧದ ಔಷಧ ಬೆಲೆ ಸೇರು ೧೬ ರೂಪಾಯಿ.

**ಅಬಾಲಾಂಧವಯೋಗ**—ನಡುನೋವು, ಮುಟ್ಟುದೋಷ, ಒಂಜೆತನ ಮೊದಲಾದ ಸ್ತ್ರೀಯರ ಎಲ್ಲಾ ಖಾಯಿಲೆಗೂ ದಿವ್ಯೌಷಧ. ಬೆಲೆ ೧೬ ಹೊತ್ತಿಗೆ ೨ ರೂಪಾಯಿ ಮತ್ತು ೫೦ ಹೊತ್ತಿಗೆ ೫ ರೂ.

**H. S- KAMAL SHERIFF, DENTSTe**
Lansdowne Buildings, Mysore.

We prepare artificial teeth with which any hard substance can be chewed. WI Extract even the strongest teeth with the greatest aese. Stuffing the hollow tooth with gold and silver a speciality. Every work is done to entire satisfction.

**Oriental Pharmacy**
Geueral Hospital Road
MYSORE
f0r
**Best Unani Medicines**